# ಸಾಂಸ್ಕೃತಿಕ ವಿಕಾಸ: ಮಾನವಶಾಸ್ತ್ರೀಯ ನೆಲೆಯಲ್ಲಿ

ಡಾ. ಎಂ. ಮಂಜಣ್ಣ
ಸಹ ಪ್ರಾಧ್ಯಾಪಕರು
ಸ್ನಾತಕೋತ್ತರ ಅಧ್ಯಯನ ಕೇಂದ್ರ
ಸರ್ಕಾರಿ ಪ್ರಥಮದರ್ಜೆ ಕಾಲೇಜು, ದಾವಣಗೆರೆ.

ಮನುಷ್ಯ ತನ್ನ ಆಲೋಚನೆಗಳನ್ನು ನಿಸರ್ಗತತ್ವದ ಅಡಿಯಲ್ಲ್ಲೀ ನಿರ್ವಚಿಸಿಕೊಳ್ಳುತ್ತಾ ನಿಸರ್ಗವನ್ನು ಮೀರುವ ಮತ್ತು ನಿಸರ್ಗವನ್ನು ನಿಸರ್ಗದ ವರ್ತಮಾನಗಳನ್ನು ವಶಪಡಿಸಿಕೊಳ್ಳಲು ಯತ್ನಿಸುತ್ತಾನೆ. ಮನುಷ್ಯನ ಮನೋವಿಕಾಸವೇ ಆತನ ಸಾಂಸ್ಕೃತಿಕ ವಿಕಾಸವೂ ಆಗಿದೆ. ಆತನಿಂದ ಪರಿಷ್ಕರಿಸಲ್ಪಟ್ಟ ಪ್ರತಿಯೊಂದು ವಸ್ತುವು ಆತನ ಸಾಂಸ್ಕೃತಿಕ ಮುಂದುವರಿಕೆಯ ಜಾಣ್ಮೆಯಾಗಿ ಗುರುತಿಸಲ್ಪಡುತ್ತದೆ. ನಿಸರ್ಗದೊಂದಿಗೆ ತಾನೂ ಒಂದಂಶವಾಗಿ ಭಾಗವಾಗಿ ಆಲೋಚನೆಗಳನ್ನು ವಸ್ತುವನ್ನು ಪರಿಷ್ಕರಿಸಿದರೆ ವಸ್ತು ಮಾನವ ಇತಿಹಾಸದ ಒಟ್ಟು ಮೊತ್ತವೆ ಆಗುತ್ತದೆ. ಸಂಕೀರ್ಣಾರ್ಥದಲ್ಲಿ ಇದನ್ನು ಮಾನವಶಾಸ್ತ್ರ ಸಮಗ್ರವಾಗಿ ಆಧ್ಯಯನ ಮಾಡಲು ಯತ್ನಿಸುತ್ತದೆ. ಸಂಸ್ಕೃತಿ ಆಧ್ಯಯನಗಳು ಮಾನವಶಾಸ್ತ್ರೀಯ ಅಧ್ಯಯನದ ಒಂದು ಭಾಗವಾಗಿರುವ ಕಾರಣ ಇವೆರಡರ ನಡುವಿನ ವ್ಯತ್ಯಾಸಗಳು ಕನ್ನಡದ ಅಧ್ಯಯನದ ಮಟ್ಟಿಗೆ ಅಸ್ಪಷ್ಟತೆಯ ತೆಳುವಿನ ಸ್ವರೂಪಗಳಾಗಿವೆ.

ಜಾಗತಿಕ ಮಟ್ಟದಲ್ಲಿ ಬುಡಕಟ್ಟು ಸಾಂಸ್ಕೃತಿಕ ಅಧ್ಯಯನಗಳು ಮಾನವಶಾಸ್ತ್ರೀಯ ನೆಲೆಯಲ್ಲಿಯೇ ಆರಂಭವಾದುದರ ಇತಿಹಾಸ ಚಿತ್ರಣ ನಮ್ಮ ಮುಂದಿದೆ. ಪಾಶ್ಚಾತ್ಯರಿಂದಲೇ ಆರಂಭವಾದ ಭಾರತೀಯ ಬುಡಕಟ್ಟುಗಳ ಅಧ್ಯಯನ ತೀರಾ ವೈಜ್ಞಾನಿಕ ಮನೋಧರ್ಮದ್ದೇನೂ ಆಗಿರಲಿಲ್ಲ. ಕಾರಣವು ಸ್ಪಷ್ಟವಿದೆ. ಭಾರತದ ಅಧ್ಯಯನ ಮಾಡಿದ ಪಾಶ್ಚಾತ್ಯ ವಿದ್ವಾಂಸರು ಶಾಸ್ತ್ರೀಯವಾಗಿ ಮಾನವಶಾಸ್ತ್ರೀಯ ಮಾನವಶಾಸ್ತ್ರಜ್ಞರಾಗಿರದೆ ಇಂಡಿಯಾದಲ್ಲಿ ಉದ್ಯೋಗ ಮಾಡುವವರಾಗಿದ್ದರು. ಇಲ್ಲವೆ ವಸಾಹತು ಮನೋಧರ್ಮದ ಸರ್ವೆಯ ಸರದಾರರಾಗಿದ್ದು ಸ್ವಲ್ಪ ಮಟ್ಟಿಗೆ' ಬುಡಕಟ್ಟು ಜೀವನದ ಬಗ್ಗೆ ಕುತೂಹಲವುಳ್ಳವರಾಗಿದ್ದರು. ಈಸ್ಟ್ ಇಂಡಿಯಾ ಕಂಪನಿಯು ಅದಿಕಾರಕ್ಕೆ ಬಂದ ತಕ್ಷಣ ಪ್ರಭುತ್ವದ ಸ್ಥಾಪನೆಗಾಗಿ ಇಂಡಿಯಾದಲ್ಲಿರುವ ಬುಡಕಟ್ಟುಗಳ ಜೀವನ ವಿಧಾನ ಆಚರಣೆ, ಭಾಷೆ, ನಿಷೇಧಗಳನ್ನು ಆಕಾರ ಸ್ವರೂಪ ಬಣ್ಣ ಮತ್ತು ಜನಸಂಖ್ಯೆಯನ್ನು ಖಾತ್ರಿಗೊಳಿಸಲು ಇಲ್ಲಿನ ಅಧಿಕಾರಿಗಳನ್ನು ಅರೆಕಾಲಿಕ ಮಾನವಶಾಸ್ತ್ರಜ್ಞರಾಗಿ ಪರಿವರ್ತಿತರಾದರು. ಪ್ರಭುತ್ವದ ಒತ್ತಡದಿಂದಾಗಿ ಬುಡಕಟ್ಟು ಮತ್ತು ಜನಪದ ಅಧ್ಯಯನ ಕೈಗೊಂಡ ಇವರು ಪೂರ್ಣ ಪ್ರಮಾಣದ ಮಾನವಶಾಸ್ತ್ರರಾಗಿಯೇ ಪರಿವತಿತರಾಗಿ ಬುಡಕಟ್ಟು ಜನಪದ ಸಂಸ್ಕೃತಿಯನ್ನು ಅಧ್ಯಯಿನಿಸಿದ ಮೊದಲ ತಲೆಮಾರಿನ ಮಾನವಶಾಸ್ತ್ರಜ್ಞರಾಗಿ ಸ್ವಯಂಘೋಷಿಸಿಕೊಂಡು ಬುಡಕಟ್ಟುಗಳ ಜೀವನ ಕ್ರಮದಲ್ಲಿಯೇ ತಮ್ಮ ವ್ಯಕ್ತಿತ್ವಗಳನ್ನು ಗುರುತಿಸಿಕೊಂಡರು.

ವಸಾಹತು ಮಾದರಿಯ ಅಧ್ಯಯನವು ಸಾಪೇಕ್ಷವಾಗಿದ್ದರೂ ಅದು ಬುಡಕಟ್ಟುಗಳ ವಿವರಣೆಗೆ ತೊಡಗಿತಾದರೂ ವಿಶ್ಲೇಷಣೆಗೆ ತೊಡಗಲಿಲ್ಲ. ಅದರ ಅವಶ್ಯಕತೆಯೂ ವಸಾಹತು ಶಕ್ತಿಗೆ ಬೇಕಿರಲಿಲ್ಲ. ಹುಟ್ಟು, ಬದುಕು, ಸಾವು ಇವುಗಳ ಮದ್ಯೆ ನಡೆಯುವ ಇಡೀ ಜೀವನಕ್ರಮವನ್ನು ಪ್ರಾಚೀನ ಮಾನವನಿಂದ ಇಂದಿನವರೆಗೆ ಹೇಗೆ ಪ್ರಕ್ರಿಯಾತ್ಮಕವಾಗಿ ಪರಿವರ್ತತವಾಗುತ್ತಾ ಬಂದಿದೆ ಎಂಬುದನ್ನು ಕ್ರಿಯಾ ಮಾನವಶಾಸ್ತ್ರ ಸಾದ್ಯಂತವಾಗಿ ನಿರ್ವಚಿಸಿ ದಾಖಲಿಸುತ್ತದೆ. ಇದರ ಮತ್ತೊಂದು ಗುಣ ಪ್ರಾಚ್ಯವಸ್ತು ಅಧ್ಯಯನಕ್ಕೆ ಸಹವರ್ತಿಯಾದುದಾಗಿದೆ. ಗುರುಮೂರ್ತಿಯವರ ಅಧ್ಯಯನ ಕ್ರಮ ಕ್ರಿಯಾಮಾನವಶಾಸ್ತ್ರೀಯ ನೆಲೆಯದು ಎಂದು ಅವರೇ ಹೇಳಿಕೊಂಡಿದ್ದಾರೆ. ಹೇಳದಿದ್ದರೂ ಮೇಲ್ನೋಟಕ್ಕೆ ಸಿಗುವ ಚಹರೆಯದು. 'ಜನಪದ ಸಮಾಜ ಮತ್ತು ಸಂಸ್ಕೃತಿ' ಎಂಬ ಇವರ ಕೃತಿಯೂ ಈ ನೆಲೆಯ ಲೇಖನ ಸಂಗ್ರಹವಾಗಿದ್ದು ಬುಡಕಟ್ಟುಗಳ ಪೂರ್ವ ಸ್ಥಿತಿಯನ್ನು ಗುರುತಿಸುವ ಬುಡಕಟ್ಟುಗಳ ಅಧ್ಯಯನ ಸಂಸ್ಕೃತಿ ಅಧ್ಯಯನ ಪ್ರಾರಂಭಿಕ ಹಂತದಲ್ಲಿ ಹೇಗೆ ಸಾಗಿತ್ತು ಎಂಬುದರ ಅಸ್ಮಿತೆಯಾಗಿ ಮುಖ್ಯವಾಗುತ್ತದೆ. ಎಲ್ಲದಕ್ಕಿಂತ ಮುಖ್ಯವಾಗಿ ತುಂಬಾ ವಿಸ್ತೃತವಾಗಿ ಬೆಳೆದು ಮೂಲ ಸ್ವರೂಪದಿಂದ ಬಿಡಿಸಿಕೊಂಡು ಹೊಸರೂಪ ಧಾರಣೆ ಮಾಡಿರುವ ಕ್ರಿಯಾ ಮಾನವಶಾಸ್ತ್ರವು ಅರವತ್ತು ಮತ್ತು ಎಪ್ಪತ್ತರ ದಶಕದಲ್ಲಿ ಯಾವ ಸ್ವರೂಪದಲ್ಲಿತ್ತು ಎಂದು ತಿಳಿಯಲು ಈ ಕೃತಿ ಸ್ವಲ್ಪ ಮಟ್ಟಿನ ಸಹಾಯಕವಾಗಬಲ್ಲದು. ಮೊದಲ ಹಂತದ ಸಂಸ್ಕೃತಿ ಅಧ್ಯಯನಗಳ ಸ್ವರೂಪ ಪರಿವರ್ತನೆಯ ಈ ಕಾಲದಲ್ಲಿ ಗಮನಿಸತಕ್ಕ ಕೃತಿಯಾಗಿ ಮುಖ್ಯವಾಗುತ್ತದೆ. ಯಾಕೆಂದರೆ ಆ ಕಾಲಘಟ್ಟದ ವಿಧಾನ ಅದಾಗಿದ್ದು ಈಗಿನ ಅಧ್ಯಯನದ ದೃಷ್ಟಿಯ ಹೊರತಾಗಿ ನೋಡಿದಾಗ ಮಾತ್ರ ಅದರ ಕ್ರಮ ತಿಳಿಯಲು ಸಾಧ್ಯವಾಗುವುದು.

ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರದಂತಹ ಜ್ಞಾನಶಿಸ್ತುಗಳು ಆಧೀನಗೊಂಡ ದೇಶಗಳ ಜನರನ್ನು ಮತ್ತು ಸಮಾಜವನ್ನು ಈ ಕಾರಣಕ್ಕಾಗಿ ಅಧ್ಯಯನಕ್ಕೊಳಪಡಿಸಿದವು. ಈ ಶಿಸ್ತುಗಳು ಶೈಕ್ಷಣಿಕ ವಿದ್ಯೆನವೂ ಸಹ ವಸಾಹತುಶಾಹಿ ರಾಜಕಾರಣದ ಹುನ್ನಾರಗಳಿಂದಲೇ ರೂಪುಗೊಂಡಿತ್ತು. ಇದರಿಂದಾಗಿ ಅಭಿಜಾತ ಸಮಾಜವಿಜ್ಞಾನಗಳ ಜ್ಞಾನಶಿಸ್ತುಗಳಿಗೆ ತಾವು ಅಧ್ಯಯನ ಮಾಡುವ ಸಮಾಜದ ಅಂತಸ್ಥ ಜಗತ್ತನ್ನು ತತ್ವಶಾಸ್ತ್ರೀಯವಗಿ ಅರ್ಥಮಾಡಿಕೊಳ್ಳಲಾಗಲಿಲ್ಲ. ಕಾರಣ ಸ್ವಷ್ಠವಾಗಿಯೇ ಇದೆ. ಈ ಜ್ಞಾನ ಶಿಸ್ತುಗಳು ಆಧೀನ ದೇಶಗಳ ಸಮಾಜವನ್ನು ವಸಾಹತು ರಾಜಕಾರಣದ ಭಾಗವಾಗಿಯೇ ಅಧ್ಯಯನ ಮಾಡಿದವು. ತಾತ್ವಿಕವಾಗಿ ಈ ಜ್ಞಾನಶಿಸ್ತುಗಳು ಸೋತ ಜನಸಮುದಾಯಗಳ ಜೊತೆ ಬೆಸೆದುಕ್ಕೊಳಪಡಿಸಿದವು. ಈ ಕಾರಣಕ್ಕಾಗಿ ಬಹುತೇಕ ಜ್ಞಾನಶಿಸ್ತುಗಳು ಕೇವಲ ಶೈಕ್ಷಣಿಕವಾಗಿ ಮಾತ್ರವಲ್ಲ, ರಾಜಕೀಯವಾಗಿಯೂ ಸಹ ಸಹ ಅಧೀನ ಸಮುದಾಯಗಳ ಹಿತಾಸಕ್ತಿಗಳ ವಿರುದ್ಧವಾಗಿದ್ದವು. ಈ ಜ್ಞಾನಶಿಸ್ತುಗಳಿಗೆ ಆಳ್ವಿಕೆಗೊಳಪಟ್ಟ ಸಮುದಾಯಗಳ 'ಒಳಗಿನ' ಜಗತ್ತಿನ ಆನಾವರಣ ಸಾದ್ಯವಾಗಲೇ ಇಲ್ಲ. ಕಾರಣ ಈ ಜ್ಞಾನಶಿಸ್ತುಗಳು ರಾಜಕೀಯವಾಗಿ ಮತ್ತು ತಾತ್ವಿಕವಾಗಿ 'ಹೊರಗಿನ'ವುಗಳಾಗಿಯೇ ಚಾಲ್ತಿಯಲ್ಲಿದ್ದವು.

ಮನುಷ್ಯ ಸಕಲ ಪ್ರಾಣಿಗಳ ಅಧಿಪತಿ. ಸಂಸ್ಕೃತಿ ಮತ್ತು ನಾಗರಿಕತೆಗಳ ಉಗಮಕ್ಕೆ ಕಾರಣಕರ್ತ. ಸಮಾಜ ಮತ್ತು ಸಂಸ್ಕೃತಿಯ ಉಗಮವನ್ನು ವೈಜ್ಞಾನಿಕ ನೆಲೆಯಲ್ಲಿ ವಿವರಿಸಿದ್ದಾರೆ. ವೇದ, ಬೈಬಲ್, ಕುರಾನ್‌ನಲ್ಲಿರುವ ದೈವನಂಬಿಕೆಯನ್ನು ನಾಜೂಕಾಗಿ ನಿರಾಕರಿಸಿದ್ದಾರೆ. ವೈಜ್ಞಾನಿಕವಾಗಿ ವಿವರಿಸುತ್ತ ಸೂರ್ಯನಿಂದ ಸಿಡಿದುಬಂದ ಭೂಮಿ ತಣ್ಣಗಾಗಲು ಲಕ್ಷ ವರ್ಷಗಳೇ ಬೇಕಾದವು. ಎಷ್ಟೋ ವರ್ಷಗಳ ನಂತರ ಜೀವ ಉದ್ಭವವಾಯಿತು. ಅದಾದ ನಂತರ ಎಷ್ಟೋ ಕಾಲದ ನಂತರದಲ್ಲಿ ಮನುಷ್ಯ ಕಾಣಿಸಿಕೊಂಡ ಎಂಬ ವಿಜ್ಞಾನದ ಸತ್ಯವನ್ನು ಸರಿಯಾಗಿ ವಿವರಿಸುವ ಪ್ರಯತ್ನ ಮಾಡಿದ್ದಾರೆ. ಮುಂದುವರಿದು ಮಂಗ ಮತ್ತು ಮಾನವ ಸಂಬಂಧದ ಬಗ್ಗೆ ಕಳೆದು ಹೋದ ಕೊಂಡಿ ಎಂದು ಗುರುತಿಸಿದ್ದಾರೆ. ಹೋಮಿನಾಯ್ಡು ಗುಂಪಿಗೆ ಸೇರಿದ ಮಾವನನಾದಿಯಾಗಿ ಗೋರಿಲ್ಲಾ, ಚಿಂಪಾಂಜಿ, ಗಿಬ್ಬನ್, ಇವು ಬೇರೆ ಬೇರೆ ವಾತಾವರಣದಲ್ಲಿ ಜೀವಿಸಿರುವುದರಿಂದ ವಿವಿಧತೆಯನ್ನು ಹೊಂದಿವೆ. ಇವುಗಳಲ್ಲಿ ವೃಕ್ಷವಾಸಿಗಳು ಮರಬಿಟ್ಟು ನೆಲದ ಮೇಲೆ ನಿಂತ ಮನುಷ್ಯ ಕೈಗಳನ್ನು ಬಳಸಲು ಪ್ರಾರಂಭಿಸಿದ. ನಂತರ ಕೈಗಳ ಕ್ರಿಯೆಯಿಂದ ಜೊತೆಗೆ ಮೆದುಳಿನ ಬೆಳವಣಿಗೆಯಾಯಿತು. ಈ ಬೆಳವಣಿಗೆಯಿಂದ ತನ್ನ ಮಾತಿನ ಬೆಳವಣಿಗೆಯಾಗಿ ಪ್ರಾಣಿಗಳ ಅಧಿಪತಿಯಾಗಲು ಸಾಧ್ಯವಾಯಿತು.

ಮುಂದಿನ ಹಂತದಲ್ಲಿ ಮಾವನಿಗೆ ಬೆಂಕಿ ಪರಿಚಯದ ಬಗ್ಗೆ ವಿವರಿಸುತ್ತ, ಆನಂತರದ ಆಹಾರವನ್ನು ಬೇಯಿಸಿ ತಿನ್ನಲು ಪ್ರಾರಂಭಿಸಿದ ಎಂಬ ಅಂಶವನ್ನು ಮಾನವಶಾಸ್ತ್ರೀಯ ನೆಲೆಯಲ್ಲಿ ಅಥೈಸಿರುವುದು ಕಂಡುಬರುತ್ತದೆ. ನಂತರ ನದಿ ತೀರಗಳಲ್ಲಿ ಬದುಕು ಪ್ರಾರಂಭಿಸಿದ ಸಂದರ್ಭದಲ್ಲಿ ಬೇಟೆ ಪ್ರಮುಖ ವೃತ್ತಿಯಾಯಿತು. ಪ್ರಾಣಿಗಳನ್ನು ಬೇಟೆಯಾಡಿ ಕೊಲ್ಲುತ್ತಿದ್ದ ಮಾನವ ತಾನೇ ಪ್ರಾಣಿಗಳನ್ನು ಸಾಕಲು ಪ್ರಾರಂಭಿಸಿದ. ಇದರ ಜೊತೆಗೆ ಮರದ ಆಯುಧಗಳ ಬಳಕೆ ನಾರಿನ ಬಟ್ಟೆಯನ್ನು ಕಂಡುಕೊಂಡ. ಇಂತಹ ಸಂದರ್ಭದಲ್ಲಿ ಗಂಡಸು ಹೊರಗೆ ಬೇಟೆಗೆ ಹೋದರೆ, ಹೆಂಗಸು ಮನೆಯಲ್ಲಿ ಕೃಷಿ ಗೃಹೋಪಯೋಗಿ ಕಾರ್ಯಗಳಲ್ಲಿ ತೊಡಗಿದಳು. ಜೀವನಕ್ಕೆ ಅಗತ್ಯವಾದ ಉತ್ಪಾದನೆ ಬೆಳೆದಂತೆಲ್ಲಾ ಭೌದ್ಧಿಕವಾಗಿಯೂ ಬೆಳೆದ. ವಿಚಿತ್ರ ಶಕ್ತಿಗಳಿಂದ ರಕ್ಷಿಸಿಕೊಳ್ಳಲು ಆರಾಧನೆಯನ್ನು ಕಂಡುಕೊಂಡ.

ಉತ್ಪಾದನೆ ಬೆಳೆದಂತೆ ಅನುಭವ ಅಭಿಪ್ರಾಯಗಳನ್ನು ತಿಳಿಸಲು ಭಾಷೆಯನ್ನು ಕಂಡುಕೊಂಡ. ಇಲ್ಲಿ ಮಾವನ ಸಮೂಹದಲ್ಲಿ ಬದುಕುತ್ತಾ ಮುಂದೆ ಗುಂಪುಗಳಲ್ಲಿ ಮುಖಂಡನನ್ನು ಆಯ್ಕೆ ಮಾಡಿಕೊಂಡ. ಇವನೇ ಭೂಮಿಗೆ ಒಡೆಯನಾದನು. ನಂತರ ಮಾನವನು ಬಿಡುವಿನ ಸಮಯದಲ್ಲಿ ಸಾಹಿತ್ಯ, ಕಲೆ, ಸಂಗೀತವನ್ನು ಕಂಡುಕೊಂಡ. ಇವು ದುಡಿಮೆಯೊಂದಿಗೆ ಬಾಯಿಂದ ಬಾಯಿಗೆ ಹರಿದು ಇವು ಒಂದು ಗುಂಪಿನಿಂದ ಮತ್ತೊಂದು ಗುಂಪಿಗೆ ಹರಿದು ಬಂದವು. ಮುಂದಿನ ದಿನಮಾನದಲ್ಲಿ ಎಲ್ಲಾ ಸಮಾಜಗಳಿಗೂ ಪಸರಿಸಿದವು. ಕಾಲಕ್ರಮದಲ್ಲಿ ಸಮಾಜ ಪ್ರಗತಿಯಾದಂತೆ ಬದಲಾವಣೆಯನ್ನು ಗುರುತಿಸಿದ್ದಾರೆ. ಸಮಾಜ ಬದಲಾಗುತ್ತಾ ಹೊಸ ಹೊಸ ರೂಪಗಳನ್ನು ಪಡೆದುಕೊಂಡಿರುವುದನ್ನು ಗಮನಿಸಲಾಗಿದೆ. ಹೀಗೆ ಸಮಾಜ ಸರಳ, ನೇರ, ಸಣ್ಣ ಮತ್ತು ಸಂಕೀರ್ಣ ಸಮಾಜಗಳಾಗಿ ಬದಲಾಗಿರುವುದನ್ನು ಕೃತಿಯು ಸಾಧ್ಯಂತವಾಗಿ ಅಲ್ಲದಿದ್ದರೂ ಆಯಾಮಗಳ ಭಿನ್ನತೆಯಲ್ಲಿ ಗುರುತಿಸಲು ಯತ್ನಿಸುತ್ತದೆ. ಇದು ಕೃತಿಯ ಆನ್ವಯಿಕತೆ ಸರಳೀಕೃತ ಭಾಷೆಯ ಸಂವಹನ ಸಾಧ್ಯತೆಯ ಅಂಶವಾಗಿಯೂ ಪುರಸ್ಕರಿಸಲ್ಪಡುವ ಕೃತಿಯಾಗಿದೆ.

**ಜನಪದ ಕಲೆ : ಸೃಜನಶೀಲ ಪ್ರಜ್ಞೆ**

ಕಲೆಯೆಂಬುದಕ್ಕೆ ಈಗಿನ ಸಾಹಿತ್ಯಕ ಪರಿಭಾಷೆಗಳಲ್ಲಿ ಏನೆಲ್ಲಾ ಅರ್ಥವಿನ್ಯಾಸಗಳಿದ್ದರೂ ಜನಪದ ಸಂಸ್ಕೃತಿಯ ಅಧ್ಯಯನ ಕ್ರಮದಲ್ಲಾದರೆ ಅದೊಂದು ಸೃಜನಶೀಲ ಪ್ರಜ್ಞೆಯೆ ಹೊರತು ಬೇರೆನಲ್ಲ. ಆದಿಮಪ್ರಜ್ಞೆಯ ಮೂರ್ತ ರೂಪವೆ ಕಲೆಯಾಗಿದೆ. ಇದು ಇಂದಿನ ಕಾಲಮಾನದ ನಾವಿನ್ಯ ರೂಪದ ಮೂರ್ತಶಿಲ್ಪಗಳ ಪಕ್ಕದಲ್ಲಿ ಸರಿದೂಗದ ಕಲೆಯಾಗಿ ಕಂಡರೂ ಅಂದಿನ ಮಾನವಪ್ರಜ್ಞೆಯ ನವೀನ ಅವಿಷ್ಕಾರವಾಗಿದ್ದಂತೂ ಕಡೆಗಣಿಸದ ಸತ್ಯ. ಆ ಕಾರಣಕ್ಕಾಗಿಯೆ ಲೇಖಕರು ತಾವೇ ನಿರ್ವಚಿಸಿಕೊಳ್ಳುತ್ತಾರೆ. 'ಆದಿಮ ಮಾನವನು ಸೃಷ್ಟಿಸಿದ ಕಲೆ ಆಧುನಿಕ ಕಲಾಮಟ್ಟದ ದೃಷ್ಟಿಯಿಂದ ಅತ್ಯಂತ ದೊರಗಾಗಿ ಕಾಣಬಹುದು. ಇಲ್ಲವೆ ಆದಿ ಮಾನವರು ಉಪಯೋಗಿಸುವ ವಿಧಾನಗಳು ಆಧುನಿಕ ಮಟ್ಟದಿಂದ ಕೆಳಗಿರಬಹುದು ಆದರೆ ಆ ಕಲಾಕೃತಿಯು ಸೃಷ್ಠಿಯಾದಾಗ ತನ್ನ ಸೃಷ್ಠಿಕರ್ತನಿಂದ ಸಮಾಜದಿಂದ ಹೆಚ್ಚಿನ ಪುರಸ್ಕಾರ ಹೊಂದಿತ್ತೆಂಬುದಷ್ಟು ನಾವು ನೆನಪಲ್ಲಿಡಬೇಕು. ಅಲ್ಲದೆ ಕಲೆಯನ್ನು ಅಭ್ಯಾಸ ಮಾಡುವವರರು ಯಾವಾಗಲೂ ತಾವು ವಿವಿಧ ಸಂಸ್ಕೃತಿಗೆ ಸೇರಿದ ಕಲೆಯನ್ನು ಅಭ್ಯಾಸ ಮಾಡುತಿದ್ದೇವೆ ಎಂಬುದನ್ನು ಸದಾ ಗಮನದಲ್ಲಿಟ್ಟುಕೊಳ್ಳಬೇಕು'. ಈ ಭೂತ ಮತ್ತು ವರ್ತಮಾನದ ಮಾನದಂಡಗಳು ಸಾಪೇಕ್ಷವಾಗಿ ಕಂಡರೂ ಪ್ರಕ್ರಿಯಾತ್ಮಕವಾದ  ಸೂಕ್ಷ್ಮ ವೈರುಧ್ಯಗಳನ್ನು ಹೊಂದಿದ ಕಾರಣ ಅವುಗಳ ಕಾಲಾನ್ವಯ ಅಧ್ಯಯನ ಸಾಧ್ಯವಾಗಬೇಕಿದೆ ಎಂಬುದನ್ನು ಈ ಕೃತಿಯು ಪ್ರಸ್ತುತ ಪಡಿಸುತ್ತದೆ.

ಮಾನವ ತನ್ನ ಅನುಭವಗಳನ್ನು ಮತ್ತೊಬ್ಬರಿಗೆ ತಿಳಿಸಲು ಪ್ರಯತ್ನ ಪಟ್ಟ ಸಂದರ್ಭದಲ್ಲಿ ಜನಪದ ಕಲೆ ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಂಡಿತು ಎಂಬ ಮಾತು ಸಮಂಜಸವಾಗಿದೆ. ಜನಪದ ಕಲೆಗೆ ನಿರ್ಧಿಷ್ಟವಾದ ಇತಿಹಾಸವನ್ನು ಹುಡುಕುವುದು ಸಾಧ್ಯವಿಲ್ಲ. ಸಮಾಜದಲ್ಲಿ ಕಲೆ ಉಗಮವಾಗಲು ಕೆಲವು ಅನುಕೂಲತೆಗಳು ಇರಬೇಕು. ಕಲೆ ಉಗಮವಾಗಲು ವಿರಾಮದ ಸಮಯ ಮತ್ತು ಜೀವನದ ಅಗತ್ಯಗಳು ಪೂರೈಕೆಯಾದ ಮೇಲೆ ಯಾವುದೇ ಕಲೆ ಸಾಹಿತ್ಯ ರೂಪಗೊಳ್ಳಲು ಸಾಧ್ಯ. ಮಾನವರಿಗೆ ಮಾಧ್ಯಮವೆಂದರೆ ಪ್ರಕೃತಿ. ಕಂಡರಿಯದ ವಸ್ತುಗಳನ್ನು ಅವನು ಸೃಷ್ಟಿಸಲಾರ. ಅವನ ಭಾವನೆಗಳಿಗೆ ಅವಕಾಶವಿರುವುದಿಲ್ಲ. ಕಲಾ ಮಾಧ್ಯಮ ರೂಪಗೊಳ್ಳುವುದು ಅವನ ಭೌಗೋಳಿಕ ಪ್ರದೇಶಗಳಿಗೂ, ಕಲೆಗೂ ಸಂಬಂಧವಿರುವುದನ್ನು ವಿವರಿಸಿದ್ದಾರೆ. ಇವು ಕಲೋಪಾಸನೆ ಜೊತೆಗೆ ಧಾರ್ಮಿಕ ಬದುಕಿನ ಭಾಗವಾಗಿ ಬಂದಿರುವುದನ್ನು ಕಾಣಬಹುದು.

ಜನಪದ ಕಲೆ ಸೃಷ್ಟಿಗೂ ನಿತ್ಯದ ಬದುಕಿಗೂ ಸಂಬಂಧವಿದೆ. ಇವುಗಳಲ್ಲಿ ಸಾಂಸ್ಕೃತಿಕ ಸನ್ನಿವೇಷದ ಕಲಾಕೃತಿಗಳಿಗೂ ತನ್ನದೇ ವಿಶೇಷವಿರುವುದು ಸೂಕ್ತವಾದ ವಿವರಣೆಯಾಗಿದೆ. ಅನೇಕ ಸಂದರ್ಭದಲ್ಲಿ ಹಬ್ಬ, ಮತ್ತು ಮದುವೆ ಗೃಹಪ್ರವೇಶ ಮೊದಲಾದ ಧಾರ್ಮಿಕ ವಿಧಿಗಳಲ್ಲಿ ಕಲೆ ರೂಪಗೊಂಡಿರುವುದನ್ನು ಕಾಣಬಹುದು.  ಸಂಗೀತವು ಕಲೆಗಳಲ್ಲಿ ತನ್ನದೇ ಮಹತ್ವವನ್ನು ಪಡೆದಿದೆ. ಮಾನವ ದುಡಿಮೆಯಲ್ಲಿ ಕೈ ಕಾಲು ಚಲನೆಯ ಲಯಕ್ಕೆ ಅನುಗುಣವಾಗಿ ರೂಪ ಪಡೆದು ಅಭಿವ್ಯಕ್ತಿಗಳಲ್ಲಿ ಹಾಡು ಉಗಮಗೊಂಡಿತು. ಸಂದರ್ಭಕ್ಕೆ ತಕ್ಕಂತೆ ಹಾಡುಗಳಲ್ಲಿ ಅರ್ಥ ಮತ್ತು ದಾಟಿಗಳು ಬದಲಾಗುವುದನ್ನು ನೋಡಬಹುದು. ವಿವಾಹ, ಋತು ಸಂದರ್ಭ, ತೊಟ್ಟಿಲು ಕಾರ್ಯ, ಮನೆತುಂಬಿಸುವಾಗ ಅವುಗಳ ದಾಟಿ ಬದಲಾಗುವುದನ್ನು ಗಮನಿಸಬಹುದು.

ಕಥೆಗಳು ಜಗತ್ತಿನ ಬಗೆಗಿರುವ ನಂಬಿಕೆಗಳು. ಇವು ಮುಖ್ಯ ಪಾತ್ರ ದೇವರು, ದೇವತೆಗಳು, ಯಕ್ಷರು ಇವರು ಪರಲೋಕದವರಾಗದೆ ಸಂಬಂಧಗಳ ರೀತಿಯಲ್ಲಿ ಮಾನವನೊಂದಿಗೆ ಸಂಪರ್ಕವಿಟ್ಟುಕೊಂಡಿರುವುದನ್ನು ಕಂಡುಕೊಂಡಿದ್ದಾರೆ. ಇವುಗಳ ಮೂಲಕ ಪ್ರಪಂಚದ ಉಗಮವನ್ನು ವಿವರಿಸುತ್ತ ಜನಪದರು ಇಷ್ಟವಲ್ಲದ ಮಾನವ ಕಷ್ಟಗಳಿಂದ ದುಷ್ಟರಿಂದ ಬಿಡುಗಡೆಯ ಉಪಯೋಗವನ್ನು ಇವು ತಿಳಿಸುತ್ತವೆ. ಗಾದೆಗಳು ಜನಪದ ಸಾಹಿತ್ಯದಲ್ಲಿ ಶ್ರಮವರ್ಗದ ಅಭಿವ್ಯಕ್ತಿ ಜನಪದ ಸಾಹಿತ್ಯ ಕಾಲದಿಂದ ಕಾಲಕ್ಕೆ ಮುಂದುವರಿಯುವ ಸಂದರ್ಭದಲ್ಲಿ ವೈವಿಧ್ಯಮಯವಾಗಿ ಗಾದೆ, ಒಗಟು, ಕಥೆ, ನಾಟಕ ಮೊದಲಾದವುಗಳಲ್ಲಿ ಮೈದಾಳಿರುವುದು ಕಂಡು ಬರುತ್ತದೆ. ಇವು ಜನರ ಬದುಕಿನಲ್ಲಿ ಮಹತ್ವದ ಸ್ಥಾನವನ್ನು ಉಳಿಸಿಕೊಂಡು ಬಂದಿವೆ. ಗಾದೆಗಳು ಜನರ ಬದುಕಿನಲ್ಲಿ ಇರಬೇಕಾದ ನ್ಯಾಯ, ಧರ್ಮ, ಕರ್ತವ್ಯಗಳ ಜೊತೆಗೆ ಮಾನವನಿಗೆ ಮಾರ್ಗದರ್ಶನ ಮಾಡುತ್ತವೆ. ಒಗಟುಗಳು ಜನರಲ್ಲಿ ಬುದ್ಧಿಶಕ್ತಿಯ ಪರೀಕ್ಷೆಗೆಯಲ್ಲಿ ಮಹತ್ವದ ಸ್ಥಾನವನ್ನು ಪಡೆದಿವೆ. ಹಚ್ಚೆ ಎಲ್ಲಾ ಸಮಾಜಗಳಲ್ಲಿ ತನ್ನದೇ ಆದ ಚಿಹ್ನೆ, ಸಂಕೇತ, ಮುದ್ರೆಗಳ ರೂಪದಲ್ಲಿ ಅಸ್ಥಿತ್ವ ಪಡೆದಿರುವುದನ್ನು ಕಾಣಬಹುದು. ಇದು ಕೆಲವು ಸಮುದಾಯಗಳಲ್ಲಿ ಧಾರ್ಮಿಕ ಚಿಹ್ನೆಯಾಗಿ ಭಕ್ತಿ ಪೂಜ್ಯ ಭಾವನೆಯಿಂದ ಕಾಣುವುದಿದೆ. ಧರ್ಮ ಸಂಪ್ರಧಾಯಗಳ ರೂಪದಲ್ಲಿ ಸಂಕೇತಗಳನ್ನು ಬಳಸುದುದರ ಮೂಲಕ ಕಲೆಯ ಪುನರ್ಜೀವನಕ್ಕೆ ಸಾಧ್ಯ ಮಾಡಿಕೊಟ್ಟಿರುವುದನ್ನು ಗಮನಿಸಿದ್ದಾರೆ.  ಜನಪದ ಕಲೆಗೂ ಮಾನವ ಬದುಕಿಗೂ ಸಂಬಂಧವಿದ್ದು ಮಾನವನ ಜೀವಂತವಾಗಿರಲು ಚೈತನ್ಯ ತುಂಬಿ ಬರುವಂತೆ ಮಾಡಿದೆ. ಆದ್ದರಿಂದ ಸಮಾಜ ಸಂಸ್ಕೃತಿ ಮತ್ತು ಮೌಲ್ಯಗಳು ಜೀವಂತವಾಗಿ ಉಳಿಯಲು ಕಲೆ ಸಾರ್ಥಕತೆಯನ್ನು ಪಡೆದಿದೆ.

ಜನಪದ ಸಂಸ್ಕೃತಿಯ ಅಧ್ಯಯನ ಕ್ರಮಗಳಿಗೆ ಸಂಬಂದಿಸಿದಂತೆ ವಿಭಾಗೀಯ ಕ್ರಮವನ್ನು ನಾವು ಆರಂಭಿಕ ಹಂತದಲ್ಲಿ ಆರ್. ಎಸ್. ಬಾಗ್ಸ್‌ನಿಂದ ಕಲಿತಿದ್ದೇವೆ. ಅದೊಂದು ಅಧ್ಯಯನಕ್ಕೆ ಸುಲಭ ಸಾಧ್ಯ ಮಾಡುವ ಕ್ರಮದ ಬಿಡಿ ಅಧ್ಯಯನದ ಅಪಾಯವೆಂಬುವುದು ಇಂದಿನ ದಿನಮಾನಗಳಲ್ಲಿ ಅರಿವಾಗುತ್ತದೆ,. ಪ್ರಸ್ತುತ ಕೃತಿಯು ಕಲೆಯ ವಿಭಾಗದಲ್ಲಿಯೂ ಇತರ ವಿಭಾಗಗಳನ್ನು ತೆಕ್ಕೆಗೆ ತೆಗೆದುಕೊಳ್ಳಲು ಯತ್ನಿಸುತ್ತದೆ. ಸಂಗೀತ, ಕತೆ, ಲಾವಣಿ, ಗಾದೆ,ಒಗಟು, ನಾಟಕ, ಹಚ್ಚೆ ಮೊದಲಾದವನ್ನು ಕಲೆಯ ಅಡಿಯಲ್ಲಿ ನಿರ್ವಚಿಸಿಕೊಂಡಿದೆ. ಕಲೆಯೆಂದರೆ ಸೃಜನಶೀಲ ಪ್ರಜ್ಞೆ ಎಂದಾದಾಗ ಇದು ಸರಿಯಾದ ಕ್ರಮವೂ ಹೌದು. ಮೇಲಿನ ಎಲ್ಲಾ ಪ್ರಕಾರಗಳು ಸೃಜನಶೀಲತೆಯ ಕೂಸಾದ ಕಾರಣಕ್ಕೆ ಈ ರೀತಿಯ ಇಡಿಯಾದ ಗ್ರಹಿಕೆಯಲ್ಲಿ ಸಂಕೀರ್ಣವಾದ ಬಂದವೂ ಇರುತ್ತದೆ. ಕಲೆಗಳು ಜನರಲ್ಲಿ ಧರ್ಮ ಸಂಪ್ರದಾಯ ಮೌಲ್ಯ

ಮುಂತಾದವುಗಳನ್ನು ಪುನರ್ಜೀವನಗೊಳಿಸಲು ಮತ್ತು ಚೇತನಗೊಳಿಸಲು ಸಹಾಯಕವಾಗುತ್ತವೆ ಎನ್ನುವ ಲೇಖಕನ ಮಾತು ಇದನ್ನು ಸ್ಪಷ್ಟಪಡಿಸುತ್ತದೆ. ದುತಂತವೆಂದರೆ ಈ ಇಡಿಯಾದ ಗ್ರಹಿಕೆಯಲ್ಲಿ ಸೂಕ್ಷ್ಮ ಒಳನೋಟಗಳು ಸಾಧ್ಯವಾಗದೆ ಹೋಗುವುದು ಸೂಕ್ಷ್ಮ ದೃಷ್ಟಿಯ ಅದ್ಯಯನಗಳು ಇದನ್ನು ಆದ್ಯಂತವಾಗಿ ತಿರಸ್ಕರಿಸುತ್ತವೆ.

**ಜನಪದ ಸಂಸ್ಥೆಗಳು : ಸಮಷ್ಟಿಯ ಪ್ರಾದಿಮ ನೆಲೆ**

ಮೂಲತಃ ಅಲೆಮಾರಿಯಾದ ಮನುಷ್ಯ ಸಮೂಹದ ಏಕವ್ಯಕ್ತಿಯಾಗಿ ಗುರುತಿಸಿಕೊಳ್ಳದೆ ಪ್ರತ್ಯೇಕತೆಯನ್ನು ಸಾಧಿಸಿಕೊಳ್ಳದೆ ಸಮೂಹದಲ್ಲೇ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಲೆತ್ನಿಸಿದ. ಅದು ಅನಿವಾರ್ಯವಾದ ಕ್ರಿಯೆಯೂ ಕೂಡ ಆಗಿತ್ತು. ನಾವು ಈ ಸಮಾಜ ಎಂದು ವ್ಯಾಖ್ಯಾನಿಸಲ್ಪಡುವ ಸ್ಥಿತಿ ತಲುಪಲು ಆತನಿಗೆ ಶತಮಾನಗಳೆ ಬೇಕಾಗಿರಬಹುದು. ಕ್ರಿಯಾ ಮಾನವಶಾಸ್ತ್ರ ಗುರುತಿಸುವಂತೆ ಏಕವ್ಯಕ್ತಿಯು ಗುಹೆ, ಪೊಟರೆ, ಪೊದೆಗಳಲ್ಲಿ ವಾಸಿಸುವಾಗ ತಾನು ಅನ್ಯವ್ಯಕ್ತಿಯೊಂದಿಗೆ ಸೆಣೆಸುವ ಮತ್ತು ಸೇರಿಕೊಳ್ಳುವ ಸಂವಹನ ಸಂಘರ್ಷವೂ ಆತನ ಸೃಜನಶೀಲ ಪಟುತ್ವವನ್ನು ಅವಲಂಬಿಸಿರುವ ಕಾರಣಕ್ಕೆ ಅದನ್ನು ಕಲೆಯೆಂದೆ ಪರಿಗಣಿಸಲಾಗಿದೆ. ಹೀಗೆ ಸಂವಹನ ಸಾಧ್ಯವಾದ ನಂತರದ ಶತಮಾನಗಳ ಅವಧಿ ಸವೆದಿದೆ. ಅಲೆಮಾರಿತನಕ್ಕೆ ಒಂದು ನಿಶ್ಚಿತ ಅವಧಿಯವರೆಗೆ ಪೆಟ್ಟುಕೊಟ್ಟಿದ್ದು ಅದಕ್ಕೆ ಅಂತ್ಯ ಕಾಣಿಸಿದ್ದು ಸ್ತ್ರೀಯೆ. ಜನನ ಮುಂತಾದ ಕಾರಣಗಳಿಂದಾಗಿ ಅನಿವಾರ್ಯ ಕೆಲವು ದಿನಗಳ ಮಟ್ಟಿಗಾದರೂ ನೆಲೆ ನಿಲ್ಲುವ ಜರೂರತ್ತು ಶುರುವಾದಾಗಲೆ ನಿಂತ ನೆಲದಲ್ಲಿಯೆ ಆಹಾರ ಕಂಡುಕೊಳ್ಳುವ ಪ್ರಕ್ರಿಯಾತ್ಮಕ ಪ್ರಜ್ಞೆ ಶುರುವಾದದ್ದು. ಸ್ತ್ರೀ ಈ ಹಂತದಲ್ಲಿ ಕೃಷಿಯನ್ನು ಕಂಡುಹಿಡಿದು ಅಲೆಮಾರಿತನದ ಹಂತದಿಂದ ಮೇಲ್ಮುಖವಾದ ಚಲನೆಗೆ ಚಾಲನೆ ನೀಡಿದಳು. ಅಂದ ತಕ್ಷಣವೇ ಅಲೆಮಾರಿತನವೆ ಅಂತ್ಯವಾಯಿತೆಂದೇನೂ ಅರ್ಥವಲ್ಲ.

ಇನ್ನೂ ಮುಂದಿನ ದಿನಮಾನಗಳಲ್ಲಿ ಸಮೂಹ ಬೆಳೆದಂತೆಲ್ಲಾ ಕುಟುಂಬದ ಸದಸ್ಯರನ್ನು ಗುರುತಿಸುವ ಕಾರಣದಿಂದಲೋ ಆಸ್ತಿಯ ಪ್ರತ್ಯೇಕತೆಯ ದೃಷ್ಟಿಯಿಂದಲೋ ಸಮೂಹ ಸಮುದಾಯಗಳಾಗಿ ಪ್ರತ್ಯೇಕತೆಯನ್ನು ಸಾಧಿಸಿಕೊಂಡಿತು. ಇವುಗಳನ್ನು ಅಧ್ಯಯನ ಮಾಡಲು ನಾವು ಸಮಾಜ ಸಂಸ್ಥೆಯೆಂಬ ಪರಿಭಾಷಿಕತೆ'ಯನ್ನು ಬಳಸುತ್ತೇವೆ. ಕುಟುಂಬವೆಂಬುದು ವಾಸ್ತವವಾಗಿ ಆದಿಮ ಸಮುದಾಯಗಳಲ್ಲಿ ಪ್ರತ್ಯೇಕತೆಯನ್ನು ಸೂಚಿಸುವ ಸಂಸ್ಥೆಯಾಗಿಯೆ ಪರಿಗಣಿಸಬೇಕಿದೆ. ಅದೇ ಸಂಸ್ಥೆ ಇಂದಿನ ಆಧುನಿಕ ಕಾಲಮಾನದಲ್ಲಿ ಸಮಷ್ಟಿತನವನ್ನು ಸೂಚಿಸುತ್ತದೆ. ಸಂಸ್ಕೃತಿ ಅಧ್ಯಯನಗಳು ಇಂದು ಕುಟುಂಬದ ಸ್ಥಾನಮಾನ ಮತ್ತು ಮಹತ್ವವನ್ನು ವ್ಯಕ್ತಿತ್ವದ ಬಳವಣಿಗೆಯ ಬಹುಮುಖ್ಯ ಸಂಸ್ಥೆಯೆಂದು ಪರಿಗಣಿಸುತ್ತದೆ. ಪ್ರಸ್ತುತ ಕೃತಿಯು ಮಾನವಶಾಸ್ತ್ರೀಯ ನೆಲೆಯಲ್ಲಿ ಈ ಅಂಶವನ್ನು ಗುರುತಿಸಬಹುದಿತ್ತಾದರೂ ಅದರ ಕಡೆಗೆ ಹೆಚ್ಚು ಆಸಕ್ತಿ ವಹಿಸಿಲ್ಲ.

ಇನ್ನು ವ್ಯಕ್ತಿಯನ್ನು ಕೌಟುಂಬಿಕ ವ್ಯಾಪ್ತಿಯೊಳಗೆ ತರುವ ಪುರುಷನ ಸಾಮಾನ್ಯ ವ್ಯಕ್ತಿತ್ವಕ್ಕೆ ಸಾಂಸ್ಕೃತಿಕ ಯಜಮಾನಿಕೆಯ ಭಾವ ಮೂಡಿಸುವ ವಿವಾಹವು ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಸಂಸ್ಥೆಯಾಗಿ ಪರಿಗಣಿತವಾಗಿದೆ. ಸಮಾಜಶಾಸ್ತ್ರೀಯ ದೃಷ್ಟಿಕೋನದ ಈ ಗ್ರಹಿಕೆಯನ್ನು ಅಧ್ಯಯನದ ಅನುಕೂಲಕ್ಕಾಗಿ ಮಾನವಶಾಸ್ತ್ರಜ್ಞರು ಕುರುಡಾಗಿಯೂ ಬಳಸಿಕೊಂಡದ್ದಿದೆ. ಬುಡಕಟ್ಟುಗಳ ಸಂಸ್ಕೃತಿಯನ್ನು ಸಮಾಜಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನ ಮಾಡುವಾಗ ಆಧುನಿಕ ಸಮಾಜಶಾಸ್ತ್ರೀಯ ಪರಿಕಲ್ಪನೆಗಳು ದೊಡ್ಡ ಮಿತಿಯನ್ನು ತಂದೊಡ್ಡುತ್ತವೆ. ಇಂಡಿಯಾದ ಬುಡಕಟ್ಟು ಸಂಸ್ಕರತಿ ಅಧ್ಯಯನ ಈ ಮಿತಿಯಿಂದ ಹೊರಬರಲು ಸಾಧ್ಯವಾಗಲಿಲ್ಲ. ಆನಪದ ಸಾಂಸ್ಕೃತಿಕ ಮೂಲ ನಂಬಿಕೆಗಳಲ್ಲಿ ಈಗ ನಾವು ನಿರ್ವಚಿಸು ಸಮಾಜ ಸಂಸ್ಥೆ ವಿವಾಹಗಳಿಗೆ ಸಂಪೂರ್ಣ ವ್ಯತಿರಿಕ್ತ ನಡೆ ಕಂಡುಬರುತ್ತದೆ. ವಿವಾಹವನ್ನು ಕುರಿತಂತೆ ಪ್ರಸ್ತುತ ಲೇಖಕರ ವ್ಯಾಖ್ಯಾನ ಹೀಗಿದೆ 'ವಿವಾಹವೆಂದರೆ ಲೈಂಗಿಕ ಸಂಬಂಧವನ್ನು ಕ್ರಮಪಡಿಸುವ ಮಕ್ಕಳಿಗೆ ಸಾಮಾಜಿಕ ಸ್ಥಾನಮಾನ ತರುವ ಒಂದು ಆಚರಣೆಯೆನ್ನಬಹುದು'. ಈ ವ್ಯಾಖ್ಯಾನ ಸಮಾಜಶಾಸ್ತ್ರೀಯ ಗ್ರಹಿಕೆಯದು. ಮತ್ತು ಆಧುನಿಕ ಧರ್ಮಶಾಸ್ತ್ರಗಳ ನೈತಿಕ ಕಾಳಜಿಯ ನೆಲೆಯಿಂದ ಹೆಣೆಯಲ್ಪಟ್ಟದ್ದು. ನಾನು ಮೊದಲೇ ತಿಳಿಸಿದಂತೆ ಜನಪದ ಸಂಸ್ಕೃತಿಯಲ್ಲಿ ವಿವಾಹವೆಂದರೆ ಇದಕ್ಕೆ ತದ್ವಿರುದ್ಧ ನಂಬಿಕೆ ಆಚರಣೆಗಳು ಕಂಡುಬರುತ್ತವೆ.

ಪ್ರತೀ ಸಮಾಜಕ್ಕೆ ತನ್ನದೇ ಆದ ನಂಬಿಕೆ ಆಚರಣೆ ಜೀವನ ಕ್ರಮ ಇರುತ್ತದೆ. ಮಾನವ ಮತ್ತು ಪ್ರಾಣಿ ಸಮಾಜದ ವ್ಯತ್ಯಾಸಕ್ಕೆ ಸಂಸ್ಕೃತಿ ಕಾರಣವಾಗುತ್ತದೆ. ಪ್ರಾಣಿಗಳ ಗುಂಪಿಗೂ ಮತ್ತು ಮಾನವ ಗುಂಪಿಗೂ ವ್ಯತ್ಯಾಸವಿದೆ. ಪ್ರಾಣಿ ಸಹಜ ಜೀವನ ಮತ್ತು ಮಾನವ ಸಹಜ ಜೀವನಕ್ಕೆ ವ್ಯತ್ಯಾಸವೇ ಸಂಸ್ಕೃತಿ. ಮಾನವ ಕೌಟುಂಬಿಕ ಜೀವನ ಸಂಸ್ಕೃತಿಯಿಂದ ನಿರ್ದೇಶಿಸಲ್ಪಡುತ್ತದೆ. ಕಾಲದಿಂದ ಕಾಲಕ್ಕೆ ಕುಟುಂಬದ ಪರಿಕಲ್ಪನೆಗಳು ಭಿನ್ನವಾಗಿವೆ. ಕುಟುಂಬದ ಪರಿಕಲ್ಪನೆ ಭಿನ್ನವಾದಂತೆ ಕಾರ್ಯಗಳೂ ಸಹ ಭಿನ್ನವಾಗಿರುವುದನ್ನು ಗಮನಿಸಬಹುದು. ಕುಟುಂಬದಲ್ಲಿ ವ್ಯಕ್ತಿ ತನ್ನ ಅಗತ್ಯಗಳಿಗೆ ಅನುಗುಣವಾಗಿ ನಡೆದುಕೊಳ್ಳುವ ಬದುಕಿನ ಆವರ್ತನಗಳನ್ನು ಕುಟುಂಬದ ಮೂಲಕ ಕಲಿಯುತ್ತಾನೆ. ಭಾರತೀಯ ಸಮಾಜದಲ್ಲಿ ಕುಟುಂಬವೆಂಬುವುದು ಅನೇಕ ಶಕ್ತ ಅಶಕ್ತರಿಗೆ ನಲೆ ನೀಡುತ್ತಾ ಬಂದ ಒಂದು ವ್ಯವಸ್ಥೆ. ಇದನ್ನ ನಾವು ಅವಿಭಕ್ತ ಕುಟುಂಬವೆಂದು ಕರೆಯಬಹುದು. ಇಲ್ಲಿ ಎಲ್ಲರಿಗೂ ಜೀವನ ನಿರ್ವಹಣೆಯ ಹಕ್ಕು ಇರುತ್ತದೆ. ಕುಟುಂಬದ ಕಾರ್ಯಗಳನ್ನು ಶ್ರದ್ಧೆಯಿಂದ ಅನುಸರಿಸುವ ಜವಾಬ್ಧಾರಿ ಕುಟುಂಬದ ಪಾಲನೆಗೆ ಕರ್ತವ್ಯ ವಂಶಾಭಿವೃದ್ಧಿ ಇದರ ಮೂಲಕ ಸಾಗುತ್ತದೆ. ಸಮಾಜದ ಕರ್ತವ್ಯಗಳ ಜೊತೆಗೆ ಸಮಾಜದಲ್ಲಿ ವ್ಯಕ್ತಿ ಶುದ್ಧನಾಗಿ ಕಾರ್ಯ ನಿರ್ವಹಿಸುವುದನ್ನು ಕಲಿಸುತ್ತದೆ. ಕುಟುಂಬದಲ್ಲಿ ಇದರೊಂದಿಗೆ ಧಾರ್ಮಿಕವಾಗಿ ಸಾಮಾಜಿಕವಾಗಿ ವ್ಯಕ್ತಿ ಗೌರವ ಮತ್ತು ಹಕ್ಕುಗಳು ಲಭ್ಯವಾಗುವಂತೆ ಮಾಡುತ್ತದೆ. ಕುಟುಂಬದಲ್ಲಿ ಮಗುವನ್ನು ಪಾಲಿಸಿ ಸಮಾಜಕ್ಕೆ ನೀಡುವ ಹೊಣೆ ಕುಟುಂಬದ ಮೇಲಿರುತ್ತದೆ.

ಕುಟುಂಬದಿಂದ ಮಾನವ ಸಂಸ್ಕೃತಿಯ ವಿನಿಮಯದ ವ್ಯಕ್ತಿಯಾಗುತ್ತಾನೆ. ಕುಟುಂಬದಲ್ಲಿ ವ್ಯಕ್ತಿಗೆ ಜೀವನ ಮೌಲ್ಯಗಳು ಕರ್ತವ್ಯಗಳನ್ನು ನಿರ್ವಹಿಸುವಂತೆ ಮಾಡುತ್ತದೆ. ಕಾಲದಿಂದ ಕಾಲಕ್ಕೆ ಹೊಸ ವಿಚಾರಗಳನ್ನು ಅರ್ಥೈಸುವತ್ತ ಸಂಸ್ಕೃತಿಯ ಪಾತ್ರ ದೊಡ್ಡದಿದೆ ಎಂಬುವುದು ಸಮಂಜಸವಾಗಿದೆ. ಹುಟ್ಟಿನಿಂದ ಸಾವಿನವರೆಗೆ ವ್ಯಕ್ತಿ ತನ್ನ ಕರ್ತವ್ಯಗಳನ್ನು ಪೂರೈಸಲು ಕುಟುಂಬ ಅವನಿಗೆ ಸಂಸ್ಕೃತಿಯ ರೂಪದಲ್ಲಿ ನೆರವಿಗೆ ಬರುತ್ತದೆ. ಇದು ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಯಾಗುವುದು ಸಹಜವಾದ ಪ್ರಕ್ರಿಯೆಯಾಗಿದೆ ಎಂಬುವುದನ್ನು ಗಮನಿಸಿದ್ದಾರೆ. ಕುಟುಂಬದಲ್ಲಿ ಇದರೊಂದಿಗೆ ವ್ಯಕ್ತಿ ಧಾರ್ಮಿಕ ಕ್ರಿಯಾವಿಧಿಗಳನ್ನು ಪೂರೈಸಲು ನೆರವು ನೀಡುತ್ತದೆ. ಭಾರತೀಯ ಸಮಾಜದಲ್ಲಿ ಧಾರ್ಮಿಕ ವಿಧಿಗಳಿಗೆ ವಿಶೇಷವಾದ ಆಧ್ಯತೆಗಳಿವೆ. ಕಾರಣ ಧಾರ್ಮಿಕ ಕಾರ್ಯಗಳಿಂದ ಅವನು ಆರೋಗ್ಯ ಅಭಿವೃದ್ಧಿ ಸಾಧ್ಯ ಎಂಬ ನಂಬಿಕೆ ಅವನಲ್ಲಿ ಬಲವಾಗಿದೆ.

ಜನಪದ ಸಂಸ್ಕೃತಿಯಲ್ಲಿ ಶ್ರಮ ಸಂಸ್ಕೃತಿಗೆ ಮಹತ್ವವಾದ ಪಾತ್ರವಿದೆ. ಪ್ರತೀ ವ್ಯಕ್ತಿಯೂ ಕುಲ ಕಸುಬುಗಳೊಂದಿಗೆ ಸಂಬಂಧವನ್ನು ಜನ ಸಂಸ್ಕೃತಿಯಲ್ಲಿ ಕಾಣಬಹುದು. ಇದರೊಂದಿಗೆ ವ್ಯಕ್ತಿ ತನ್ನ ಕಸುಬಿನೊಂದಿಗೆ ಪರಿಣಿತಿಯನ್ನು ಪಡೆದಂತಾಗುತ್ತದೆ. ಜೊತೆಗೆ ಕೌಟುಂಬಿಕ ಭದ್ರತೆಯನ್ನು ಪಡೆಯಲು ಸಾಧ್ಯವಾಗುತ್ತದೆ. ಹಾಗೆಯೇ ಕುಟುಂಬದಲ್ಲಿ ಸದಸ್ಯರ ಮೇಲಿನ ನಿಯಂತ್ರಣದ ಜೊತೆಗೆ ಕರ್ತವ್ಯದ ಹೊಣೆ ನಡವಳಿಕೆ ಮೊದಲಾದ ಜವಾಬ್ಧಾರಿ ಹಿರಿಯರ ಮೇಲೆ ಇರುತ್ತದೆ. ಇದರೊಂದಿಗೆ ಸದಸ್ಯರ ರಕ್ಷಣೆ ಭದ್ರತೆಯನ್ನು ಒದಗಿಸುವುದು ಕುಟುಂಬದ ಕರ್ತವ್ಯವಾಗಿದೆ. ಜೊತೆಗೆ ದೈಹಿಕ ನ್ಯೂನ್ಯತೆಗಳು ಇರುವ ವ್ಯಕ್ತಿಗೆ ಮತ್ತು ಅಶಕ್ತರಿಗೆ ನೆರವು ನೀಡುವುದು ಕುಟುಂಬದ ಕರ್ತವ್ಯವಾಗಿದೆ. ಇದರಿಂದ ಅವನಿಗೆ ಮಾನಸಿಕವಾಗಿ ಶಕ್ತಿ ತುಂಬುವ ಕೆಲಸವನ್ನು ನಿರ್ವಹಿಸುತ್ತದೆ. ಪ್ರಸ್ತುತ ಸಮಾಜದಲ್ಲಿ ಇದರ ಅಗತ್ಯ ಮತ್ತು ಮಹತ್ವವನ್ನು ಪ್ರತಿಯೊಬ್ಬರೂ ಅರಿಯಬೇಕಾಗಿದೆ.

ಕುಟುಂಬದ ಕರ್ತವ್ಯಗಳಲ್ಲಿ ವ್ಯಕ್ತಿಯ ವ್ಯಕ್ತಿತ್ವದ ಬೆಳವಣಿಗೆ ಪ್ರಮುಖವಾಗಿದುದ್ದು. ಕುಟುಂಬವು ವ್ಯಕ್ತಿಗೆ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ನೆರವು ನೀಡುತ್ತದೆ. ಇದರಿಂದ ಅವನು ಕುಟುಂಬದೊಂದಿಗೆ ಮತ್ತು ಹೊರಗಿನ ಸಮಾಜದಿಂದ ಕಲಿಯುವಿಕೆಗೆ ನೆರವಾಗುತ್ತದೆ. ಕಲವು ಸಂಬಂರ್ಭಗಳಲ್ಲಿ ಕೌಟುಂಬಿಕ ಪಾತ್ರಕ್ಕಿಂತ ವ್ಯಕ್ತಿಗತ ಕ್ರಿಯೆಗಳ ಮೇಲೆ ವ್ಯಕ್ತಿತ್ವ ರೂಪಗೊಳ್ಳುವುದನ್ನು ಗುರುತಿಸಿದ್ದಾರೆ. ವಿವಾಹ ಕುಟುಂಬದ ಮುಖ್ಯವಾದ ಕ್ರಿಯಾವಿಧಿಯಾಗಿದೆ. ಇದು ಆಯಾ ಸಂಸ್ಕೃತಿಗಳಲ್ಲಿ ಭಿನ್ನತೆಯನ್ನು ಪಡೆದುಕೊಂಡಿರುತ್ತದೆ. ವಿವಾಹದ ಮುಖ್ಯ ಕರ್ತವ್ಯ ವಂಶಾಭಿವೃದ್ಧಿಯಾಗಿರುತ್ತದೆ. ಇದು ವ್ಯಕ್ತಿಗಳಲ್ಲಿ ವ್ಯವಹಾರಿಕವಾಗಿರದೆ ಕುಟುಂಬಕ್ಕೆ ಗೌರವದ ಸಂಕೇತವಾಗಿದೆ. ಎಂಬುವುದು ಸಮಂಜಸವಾಗಿದೆ. ಆದರೆ ಇಂದು ಸಂಬಂಧಗಳಲ್ಲಿ ಸಡಿಲತೆಗಳು ಕಂಡುಬರುತ್ತಿವೆ. ಇದರಿಂದ ವಿವಾಹದಂತಹ ಕ್ರಿಯಾವಿಧಿಯಲ್ಲಿ ಪಾವಿತ್ರತೆಯನ್ನು ಕಳೆದುಕೊಂಡಿದೆ ಎಂಬುವುದನ್ನು ಗಮನಿಸಬಹುದು. ಕುಟುಂಬದಲ್ಲಿ ರಕ್ತ ಸಂಬಂಧಗಳಿಗೆ ಮಹತ್ವದ ಸ್ಥಾನವಿದೆ. ಇಲ್ಲಿ ಕುಲ ಬೆಡಗು ಬಳ್ಳಿ ಬಗೆಗಳಿರುತ್ತವೆ. ರಕ್ತ ಸಂಬಂಧದಲ್ಲಿ ಅಭಿಮಾನ ಹೆಚ್ಚು. ಕೆಲವು ಸಂದರ್ಭದಲ್ಲಿ ಕುಲಗೋತ್ರಗಳು ಚೆದುರಿರುವ ಸಂದರ್ಭಗಳೂ ಉಂಟು. ಇವರು ಧಾರ್ಮಿಕ ವಿಧಿ ವಿಧಾನಗಳಲ್ಲಿ ಒಬ್ಬರಿಗೊಬ್ಬರು ಸೇರಿವುದು ಅಭಿಮಾನದ ಸಂಕೇತ ಎಂಬುವುದು ಸ್ಪಷ್ಟ. ಇಂದು ರಕ್ತ ಸಂಬಂಧಗಳಲ್ಲಿ ಆಸ್ತಿ ಮತ್ತಿತರ ಕಾರಣಕ್ಕಾಗಿ ಮಧುರ ಬಾಂಧವ್ಯ ಇಲ್ಲದಿರುವುದು ಸಮಾಜದ ಶಿಥಿಲತೆಗೆ ಕಾರಣವಾಗಿದೆ.

ಜನಪದ ಸಂಸ್ಥೆಗಳಲ್ಲಿ ಒಂದಾದ ನೆರಹೊರೆಗೆ ಮಹತ್ವದ ಸ್ಥಾನವಿದೆ. ಜನಪದರಲ್ಲಿ ಪರಸ್ಪರ ಸಹಕಾರ ಸಹಬಾಳ್ವೆ ಇರುತ್ತದೆ. ಇದರೊಂದಿಗೆ ಪರಸ್ಪರ ಪರಿಚಯವಿರುತ್ತದೆ. ಒಂದೇ ಪ್ರದೇಶದಲ್ಲಿ ಒಂದೇ ಪರಿಸರದಲ್ಲಿ ವಾಸಿಸುವುದರಿಂದ ಅವರಿಗೆ ಅಭಿಮಾನ ಹೆಚ್ಚೇ ಇರುತ್ತದೆ. ವಿಶೇಷವೆಂದರೆ ಬೇರೆ ಬೇರೆ ಕೇರಿ ಬೀದಿಗಳಿದ್ದರೂ ಪರಸ್ಪರ ನಾವು ಎಲ್ಲರೂ ಒಂದು ಎಂಬ ಭಾವನೆ ಜನಪದರಲ್ಲಿದೆ. ಎಲ್ಲರೂ ಹಬ್ಬ ಹರಿದಿನಗಳಲ್ಲಿ ಒಂದಾಗಿ ಸಹಬಾಳ್ವೆ ನಡೆಸುವುದು ಕಂಡು ಬರುತ್ತದೆ. ಜನಪದರಲ್ಲಿ ಆಸ್ತಿ ವಿಚಾರಗಳಿಗೆ ಮಹತ್ವದ ಸ್ಥಾನವಿದೆ. ಆಸ್ತಿ ಕುಟುಂಬದಲ್ಲಿನ ಹಿರಿಯನ ಸ್ವಾಧೀನದಲ್ಲಿರುತ್ತದೆ. ಆದಿಮಾನವನ ಕಾಲದಲ್ಲಿ ಪ್ರಾಕೃತಿಕ ಸಂಪತ್ತು ಎಲ್ಲರ ಸ್ವತ್ತಾಗಿತ್ತು. ನಂತರದ ದಿನಮಾನಗಳಲ್ಲಿ ಬಲುಉಳ್ಳವರ ಕೈಸೇರಿದ್ದು ನಿಜವಾಗಿದೆ. ಮುಂದೆ ಎಲ್ಲರ ಉಪಯೋಗಕ್ಕೆ ಇದ್ದ ವಸ್ತುಗಳು ನಂತರ ಉಳ್ಳವರಿಗೆ ಮಾತ್ರ ಸೀಮಿತವಾಗಿದ್ದು ಸಮಾಜದ ಅಸಮಾನತೆಗೆ ಕಾರಣವಾಯಿತು ಎಂಬುವುದನ್ನು ಸೂಕ್ತವಾಗಿ ವಿವರಿಸಿದ್ದಾರೆ. ಕೆಲವು ಸಾರ್ವಜನಿಕ ವಸ್ತುಗಳು ಎಲ್ಲರಿಗೂ ಸೇರಬೇಕೆಂಬುದು ಜನಪದರ ನಂಬಿಕೆ. ಜನರಿಗೆ ತೊಂದರೆಯಾಗದಂತೆ ಊರಿಗೆ ಕೆಲವು ಕಟ್ಟುಪಾಡುಗಳನ್ನು ವಿಧಿಸುತ್ತಾರೆ. ಆಸ್ತಿಗಳಲ್ಲಿ ಚಿರ ಮತ್ತು ಚರ ಎಂದು ಎರಡು ಬಗೆ ಕೆಲವು ಸಂದರ್ಭಗಳಲ್ಲಿ ಆಸ್ತಿಯನ್ನು ಮಾರಬಹುದಾಗಿರುತ್ತದೆ. ಆಸ್ತಿಗಳಲ್ಲಿ ಪಿತ್ರಾರ್ಜಿತ ಮತ್ತು ಸ್ವಯಾರ್ಜಿತ ಎಂದು ಭಾಗ ಮಾಡಬಹುದು. ಪಿತ್ರಾರ್ಜಿ ಆಸ್ತಿಯಲ್ಲಿ ಎಲ್ಲರಿಗೂ ಪಾಲಿರುತ್ತದೆ. ಇಲ್ಲಿ ಜೀವನಾಂಶಕ್ಕೆ ಹೆಣ್ಣು ಮಕ್ಕಳಿಗೂ ಹಕ್ಕಿರುತ್ತದೆ. ಕೊನೆಯದಾಗಿ ಆಸ್ತಿ ಎಂದರೆ ಅದು ಕೇವಲ ವ್ಯವಹಾರಿಕವಲ್ಲ. ಅದು ಜನಪದರಿಗೆ ಪಾರಮಾರ್ಥಿಕವಾದುದ್ದುಕೂಡ ಎಂಬುದುವುದು ಜನಪದರ ನಂಬಿಕೆ. ಇಂದು ಈ ಸಂಬಂಧಗಳು ಬದಲಾವಣೆಯಾಗಿ ಆಸ್ತಿ ಎಂಬುದುದು ಸ್ವಾರ್ಥ ಲಾಲಸ್ಯದಿಂದ ಕೂಡಿದ್ದು ಸಂಬಂಧಗಳಿಗೆ ಬೆಲೆ ಇಲ್ಲದಂತಾಗಿದೆ.

ಜನಪದರ ದೃಷ್ಟಿಯಲ್ಲಿ ಶ್ರಮಕ್ಕೆ ತನ್ನದೇ ಆದ ಕಲ್ಪನೆಯಿದೆ. ಜನಪದ ಸಮಾಜದಲ್ಲಿ ಶ್ರಮಕ್ಕೆ ಹೆಚ್ಚಿನ ಮಹತ್ವವಿದೆ. ಶ್ರಮದಲ್ಲಿ ಕಾಲದ ಪರಿಗಣನೆ ಇರುವುದಿಲ್ಲ. ಎಲ್ಲರೂ ಶ್ರಮದಲ್ಲಿ ಭಾಗಿಯಾವುದರಿಂದ ಆರ್ಥಿಕ ಅಭ್ಯುದಯಕ್ಕೆ ಕಾರಣವಾಗುತ್ತದೆ. ಇದರಿಂದ ಸಮಾಜದಲ್ಲಿ ಸುಖ ಶಾಂತಿ ನೆಲೆಸಲು ಸಹಾಯಕವಾಗುತ್ತದೆ. ಶರಣ ನುಡಿಯಂತೆ ಜನಪದರಲ್ಲಿ ಕಾಯಕಕ್ಕೆ ಸಮಯವಿಲ್ಲ. ಜನಪದ ಸಮಾಜದಲ್ಲಿ ಕಾಯಕದ ವಿಭಜನೆಗೆ ಮಹತ್ವವಿದೆ. ತಮಗೆ ಒಪ್ಪಿಸಿರುವ ಕೆಲಸಗಳನ್ನು ಅವರವರೇ ನಿರ್ವಹಿಸಬೇಕಾಗುತ್ತದೆ. ಇದರ ಜೊತೆಗೆ ಲಿಂಗ, ವಯಸ್ಸು ಜಾತಿಗಳ ಆಧಾರದ ಮೇಲೆ ಶ್ರಮ ವಿಭಜನೆ ಇರುತ್ತದೆ. ಜನಪದರ ದೃಷ್ಟಿಯಲ್ಲಿ ಶ್ರಮಕ್ಕೆ ವ್ಯವಹಾರದ ಕಲ್ಪನೆಯಿಲ್ಲ. ಅವರಲ್ಲಿ ಶ್ರಮದ ಬಗ್ಗೆ ಅರಿವು ಇರುವುದನ್ನು ನಾವು ಮನಗಾಣಬೇಕಾದರೆ ದಿನಗೂಲಿಯಿಂದ ಇಡಿದು ವಾರ್ಷಿಕ ಕೂಲಿಯವರೆಗೂ ಕೆಲಸಗಾರರನ್ನು ನೇಮಿಸಿಕೊಳ್ಳುವ ನಿಯಮವಿದೆ. ಕೂಲಿ ಕಾರ್ಮಿಕನಿಗೂ ಸಹ ಮನೆಯಲ್ಲಿ ಗೌರವಕ್ಕೆ ಧಕ್ಕೆ ಇರುವುದಿಲ್ಲ. ಅವನನ್ನು ಮನೆಯಲ್ಲಿ ಒಬ್ಬ ಸದಸ್ಯನಂತೆ ಕಾಣಲಾಗುತ್ತದೆ. ಆದರೆ ಇಂದು ಶ್ರಮವು ವ್ಯವಹಾರಿಕವಾಗಿದೆ. ಇಂದು ಕೂಲಿ ಕಾರ್ಮಿಕರ ಗುಂಪು ಸೃಷ್ಟಿಯಾಗಿದೆ. ಮೊದಲು ಶ್ರಮ ಮತ್ತು ಮನರಂಜನೆ ಜೊತೆಯಾಗಿ ಸಾಗುತ್ತಿದ್ದವು. ಇಂದು ಮನರಂಜನೆ ಮತ್ತು ಶ್ರಮ ಬೇರೆ ಬೇರೆಯಾಗಿ ವ್ಯವಹಾರಿಕವಾದಂತಹ ವಸ್ತುಗಳಾಗಿವೆ.

ದಲಿತಜಾನಪದವು ನಿರ್ಮಾಣಗೊಂಡಿದ್ದೇ ದ್ರಾವಿಡ ಪಶುಪಾಲಕರು ಮತ್ತು ಬೇಸಾಯಗಾರರು ಸಮೀಕರಣಗೊಂಡಿದ್ದರಿಂದ. ದ್ರಾವಿಡನಾಡುಗಳಿಗೆ ವಲಸೆ ಬಂದ ಕುರುಬ, ಗೌಡ, ಗೊಲ್ಲ, ಬೇಡ ಮೊದಲಾದ ಬೇಟೆಗಾರ ಪಶುಪಾಲಕ ಅರೆಕೃಷಿಕ ದ್ರಾವಿಡಜನ ವಿಭಾಗಗಳು ಇಲ್ಲಿಯ ಮೂಲ ಕೃಷಿಕರಿಂದ ಬೇಸಾಯವನ್ನು ಪಡೆದರು. 'ಪ್ರಕ್ರಿಯೆ ಒಂದೇ ಭಾರಿಗೆ ನಡೆಯದೆ ಹಂತ ಹಂತವಾಗಿ ಘಟಿಸಿರುವಂತಹದ್ದಾಗಿದೆ. ಅಖಿಲ ಭಾರತವನ್ನು ದಕ್ಷಿಣದ್ರಾವಿಡ ರಾಜ್ಯಗಳಲ್ಲಿರುವ ಅಮ್ಮನ ಆರಾಧನೆಯಿಂದಾಗಿ ಎರಡು ಘಟಕಗಳನ್ನಾಗಿ ವಿಂಗಡಿಸಬಹುದಾಗಿದೆ. ಒಂದು ಹೊಲೆಮಾದಿಗ ಕೃಷಿಮೂಲದ ಸಂಸ್ಕೃತಿ ಇನ್ನೊಂದು ಉಳಿದೆಲ್ಲ ದ್ರಾವಿಡಜಾತಿಗಳ ವಲಸೆಗಾರ ಕುಮ್ರಿ ಬೇಸಾಯಗಾರ ಪಶುಪಾಲಕ ಸಂಸ್ಕೃತಿ ಎನ್ನುವ ಹಿರೇಮಠರ ಮಾತು ಶ್ರಮ ಸಂಸ್ಕೃತಿಗೆ ಹಿಡಿದ ಕನ್ನಡಿಯಾಗಿದೆ.

ಸಾಮಾನ್ಯವಾಗಿ ದುಡಿಯುವ ವರ್ಗ, ಶೋಷಿತ ವರ್ಗಗಳು ಆಳುವ ವರ್ಗದ ಸಂಸ್ಕೃತಿಯನ್ನು ತಿಳಿದೋ ತಿಳಿಯದೆಯೋ ಅನುಸರಿಸಲು ತೊಡಗುತ್ತಾರೆ. ಇದಕ್ಕೆ ಒತ್ತಾಯ ಕಾರಣವಾಗಿರುವ ಇಲ್ಲವೇ ಆಳುವವರ್ಗದ ಜೊತೆ ಘರ್ಷಣೆ ತಪ್ಪಿಸಲು ಆಳಿಸಿಕೊಳ್ಳುವವರು ಮಾಡಿಕೊಂಡಿರುವ ಹೊಂದಾಣಿಕೆ ಕಾರಣವಾಗಿರಬಹುದು. ಅಂಥ ಸಂದರ್ಭದಲ್ಲಿ ಆಳುವವರ ಪ್ರತಿಷ್ಠಿತಸಂಸ್ಕೃತಿಯನ್ನು ಪ್ರಧಾನ ಸಂಸ್ಕೃತಿಯೆಂದೂ ಉಳಿದ ಸಂಸ್ಕೃತಿಗಳನ್ನು ಅಧೀನಸಂಸ್ಕೃತಿಗಳೆಂದೂ ಕರೆಯಬಹುದು. ಈ ಪ್ರಧಾನ ಸಂಸ್ಕೃತಿಯ ಪ್ರಭಾವಗಳು ಉಳಿದ ಸಂಸ್ಕೃತಿಗಳ ಮೇಲೆ ಆದರೂ ಅದನ್ನು ಮೀರಿ ಅಧೀನಸಂಸ್ಕೃತಿಗಳ ಒಳಗೇ ಒಂದು ವಿರೋಧದ ನೆಲೆ ರೂಪುಗೊಳ್ಳುತ್ತಾ ಹೋಗುತ್ತದೆ. ಇದು ಪ್ರಧಾನಸಂಸ್ಕೃತಿಗೆ ಪ್ರತಿಯಾಗಿ ಹುಟ್ಟುವುದರಿಂದ ಇದನ್ನು ಪ್ರತಿಸಂಸ್ಕೃತಿಯೆಂದು ಕರೆಯಬಹುದು. ಇದು ಶತ್ರುತ್ವದ ಸಂಬಂಧವನ್ನು ಪಡೆದಿರಬಹುದು, ಇಲ್ಲವೆ ಸಹಚರ ಸಂಬಂಧವನ್ನಾದರೂ ಪಡೆದಿರಬಹುದು. ಒಟ್ಟಿನಲ್ಲಿ ಅರಿವಿಗೆ ಬರದ ರೀತಿಯ ಸಂಘರ್ಷಾತ್ಮಕ ಕ್ರಿಯೆಯೊಂದು ಅಧೀನಸಂಸ್ಕೃತಿಗಳಲ್ಲಿ ನಡೆಯುತ್ತಿರುತ್ತದೆ. ಸಹಜ ಭೌತವಾದದ ನೆಲೆಯಲ್ಲಿ ನೋಡಿದರೆ ಅವೈದಿಕ ದೃಷ್ಟಿಕೋನ ಮತ್ತು ಲೋಕಾಯತದ ನಡುವೆ ಗಮನಾರ್ಹವಾದ ಸಾಮ್ಯವು ಕಂಡುಬರುತ್ತದೆ.

ಜನಪದರ ದೃಷ್ಟಿಯಲ್ಲಿ ಕಾಲಕ್ಕೆ ಅವರದೇ ಆದ ಕಲ್ಪನೆಯಿದೆ. ಅವರು ಕಾಲವನ್ನು ಋತು ವ್ಯಾಪಾರಗಳಿಂದ ಅಳೆಯುತ್ತಾರೆ. ಜೊತೆಗೆ ಪ್ರಾಕೃತಿಕ ಬದಲಾವಣೆಗೆ ಅನುಗುಣವಾಗಿ ಕಾಲವನ್ನು ವಿಭಜಿಸುತ್ತಾರೆ. ಇದರೊಂದಿಗೆ ಸಂಸ್ಕೃತಿಗೆ ಸಂಬಂಧಿಸಿದಂತೆ ಹುಟ್ಟಿನಿಂದ ಸಾವಿನವರೆವಿಗೂ ಕೆಲವು ನಿರ್ಧಿಷ್ಟ ಕಾಲಮಾನದಲ್ಲಿ ಜರಗುವ ಕ್ರಿಯಾವಿಧಿಗಳಿರುತ್ತವೆ. ಇವುಗಳು ಪ್ರಕೃತಿ ಮತ್ತು ಜನಪದರ ನಡುವಿನ ಸಂಬಂಧದ ಮೂಲಕ ನಿರ್ಧಾರಗೊಳ್ಳುತ್ತವೆ. ಆದ್ದರಿಂದ ಶ್ರಮ ಮತ್ತು ಕಾಲ ಪ್ರಾಕೃತಿಕ ಸಂಬಂಧವನ್ನು ಹೊಂದಿವೆ. ವಿರಾಮಕ್ಕೆ ಜನಪದರಲ್ಲಿ ತನ್ನದೇ ಆದ ಅರ್ಥವಿದೆ. ಆಧುನಿಕರಂತೆ ದುಡಿಮೆ ಮಧ್ಯದಲ್ಲಿ ವಿರಾಮದ ಕಲ್ಪನೆ ಜನಪದರಲ್ಲಿ ಇಲ್ಲ. ಯಾವುದೇ ವ್ಯಕ್ತಿಯಾಗಲಿ ದೈಹಿಕವಾಗಿ ದಣಿವಾಗುವ ವ್ಯಕ್ತಿಗೆ ವಿಶ್ರಾಂತಿ ಬೇಕು. ಆದರೆ ಜನಪದರಲ್ಲಿ ವಿಶ್ರಾಂತಿ ಎಂಬುದು ಕೆಲಸದಲ್ಲಿನ ತೊಡಗುವಿಕೆಯೊಂದಿಗೆ ವಿಶ್ರಾಂತಿಯನ್ನು ಪಡೆಯುತ್ತಾರೆ. ಕಾರಣ ಶ್ರಮ ಮತ್ತು ಮನರಂಜನೆ ಒಂದಕ್ಕೊಂದು ಪೂರಕವಾದವು ಎಂಬುವುದನ್ನು ಲೇಖಕರು ಮನಗಂಡಿದ್ದಾರೆ. ಜನಪದರು ಕಾಯಕದೊಂದಿಗೆ ಮನರಂಜನೆಯನ್ನು ಪಡೆಯುತ್ತಾರೆ. ಇಡೀ ಗುಂಪು ಅದರಲ್ಲಿ ಭಾಗವಹಿಸುತ್ತದೆ. ಋತುವಿಗೆ ತಕ್ಕಂತೆ ಮನರಂಜನೆ

ಕಾರ್ಯಗಳನ್ನು ಜರುಗಿಸುವುದು ಜನಪದರಲ್ಲಿ ವಾಡಿಕೆಯಾಗಿದೆ. ಬದುಕಿಗೆ ಬೇಕಾಗಿರುವ ಎಲ್ಲಾ ಬಗೆಯ ವಸ್ತುಗಳನ್ನು ಸಂಗ್ರಹಿಸಿರುತ್ತಾರೆ. ಬೇಸಿಗೆಯಲ್ಲಿ ಬಿಡುವಿನ ಕಾಲವಾದ್ದರಿಂದ ಮಕ್ಕಳಿಗೆ ವಿವಾಹದ ಸಂಬಂಧಗಳನ್ನು ನಿರ್ವಹಿಸಲಿಕ್ಕೆ ಸೂಕ್ತ ಕಾಲವಾಗಿದೆ. ಇದರ ಜೊತೆಗೆ ಪುಣ್ಯ ಕ್ಷೇತ್ರಗಳ ದರ್ಶನ ಹಬ್ಬ ಹರಿದಿನ ಇಷ್ಟಮಿತ್ರರನ್ನು ಕಾಣುವುದು ಈ ಬಿಡುವಿನ ಸಮಯ ಸೂಕ್ತವಾಗಿರುತ್ತದೆ.

ಜನಪದರ ದೃಷ್ಟಿಯಲ್ಲಿ ಧರ್ಮ ನಿಸರ್ಗದ ಪ್ರಕೋಪವನ್ನು ಎದರಿಸಲು ಪ್ರಾಚೀನ ಮಾನವ ಕಂಡುಕೊಂಡ ಮಾಧ್ಯಮ ದೈವ. ಸಕಲ ಸಂಕಟಗಳಿಗೆ ಪರಿಹಾರ ನೀಡುವವನು ದೈವ ಎಂಬ ನಂಬಿಕೆ ಅವರಲ್ಲಿದೆ. ದೈವವನ್ನು ನಂಬಿದರೆ ನಮ್ಮ ಪೈರು, ಸಂಪತ್ತು ಮತ್ತು ರೋಗಗಳಿಂದ ಹಾಗೂ ದುಷ್ಟ ಶಕ್ತಿಗಳಿಂದ ರಕ್ಷಣೆ ಪಡೆಯಬಹುದೆಂಬ ಬಲವಾದ ನಂಬಿಕೆ ಅವನಲ್ಲಿತ್ತು. ಎಂಬುವುದನ್ನು ಮನಗಂಡಿದ್ದಾರೆ. ಇದಲ್ಲದೆ ಜನಪದರಲ್ಲಿ ಹಬ್ಬ ಜಾತ್ರೆ, ವಿಧಿಗಳ ಆಚರಣೆಗಳಿವೆ. ಜನಪದರು ಹಬ್ಬಗಳನ್ನು ಆಚರಿಸಲು ಪಂಚಾಂಗದ ಸಹಾಯವನ್ನು ಪಡೆಯುವುದಿದೆ. ಇದರಲ್ಲಿ ಫಲಶಕ್ತಿಗೆ ಸಂಬಂಧಿಸಿದ ದೈವಗಳಾದ ಮಾರಮ್ಮ, ಲಕ್ಕಮ್ಮ ಮೊದಲಾದವು ಬಲಿ ಬೇಡುವ ದೈವಗಳಾಗಿರುವುದನ್ನು ಕಂಡುಕೊಂಡ ಮಾನವ ಅದನ್ನು ಒಂದು ಪರಂಪರೆಯನ್ನಾಗಿ ಮುಂದುವರಿಸಿಕೊಂಡು ಬಂದಿದ್ದಾನೆ. ಆದಿ ಮಾನವನ ದೈವದ ರೂಪಕ ಪ್ರಜ್ಞೆಯು ನಿಸರ್ಗವನ್ನು ವಿವರಿಸುವುದೂ ಆಗಿತ್ತು. ಹಾಗೆಯೇ ತನ್ನ ಪರಿಸರವನ್ನು ಶಕ್ತಿಯ ಬಿಂಬಗಳಲ್ಲೂ ತೋರುವುದಾಗಿತ್ತು. ಇಂಥ ಕ್ರಿಯೆಗೆ ಸ್ಥಿತಿಗೆ ಪ್ರಕ್ರಿಯೆಗೆ ವಸ್ತು ಜಗತ್ತು, ಕೂಡ ಪರೋಕ್ಷ ಕಾರ್ಯ ಕಾರಣ ಸಂಬಂಧಗಳಿಂದ ಅರ್ಥ ಸಂಬಂಧವನ್ನು ಬಿತ್ತಿದೆ. ದೈವವು ವಸ್ತುವಿನ ಒಳಗಿರುವ ಚೈತನ್ಯವೆಂದು ಆದಿಮ ಆಚರಣೆಗಳು ಸೂಚಿಸುತ್ತವೆ ಆದಿವಾಸಿಗಳಲ್ಲಿ ಇನ್ನೂ ದಟ್ಟವಾಗಿ ಉಳಿದಕೊಂಡಿರುವ ಆದಿಮದ ಆಚರಣೆಗಳು ಶಕ್ತಿಯನ್ನು ನಿಸರ್ಗದ ಮತ್ತು ಸಂಗತಿಯಲ್ಲೇ ನಿರೂಪಿಸುತ್ತವೆ.

ಜನಪದರಲ್ಲಿ ನಂಬಿಕೆಗಳಲ್ಲಿ ಶಕುನಗಳಿಗೆ ಮಹತ್ವದ ಸ್ಥಾನವಿದೆ. ಅದರಲ್ಲಿ ಕಾಗೆ, ಬೆಕ್ಕು, ಕೊಡ, ಕಟ್ಟಿಗೆ, ಸೀನು ಇನ್ನೂ ಮುಂತಾದವುಗಳ ಮೇಲೆ ಆತನಿಗೆ ಬಲವಾದ ನಂಬಿಕೆ. ಇವುಗಳು ಜನಸಮುದಾಯಕ್ಕೆ ಮತ್ತು ಪ್ರಾದೇಶಿಕತೆಗೆ ತಕ್ಕಂತೆ ಬದಲಾಗಿರುವುದನ್ನು ಮನಗಂಡಿದ್ದಾರೆ. ಇನ್ನು ಆತ್ಮದ ಬಗ್ಗೆ ಜನಪದರಿಗೆ ಬಲವಾದ ನಂಬಿಕೆ ಇದೆ. ಬಹುಶಃ ಇದನ್ನು ಹಿರಿಯರ ಹಬ್ಬದ ಸಂದರ್ಭದಲ್ಲಿ ಮತ್ತು ಸಾವಿನ ಸಂದರ್ಭದಲ್ಲಿ ವ್ಯಕ್ತಿ ಬಳಸುವ ವಸ್ತುಗಳೊಂದಿಗೆ ಪೂಜಾ ಕ್ರಿಯೆಗಳನ್ನು ನಡೆಸುವುದಿದೆ. ಇದರ ಜೊತೆಗೆ ಆಕಾಶಕ್ಕೆ ಸಂಬಂಧಿಸಿದ ನಂಬಿಕೆಗಳೂ ಕೂಡ ಜನಪದರಲ್ಲಿ ದಟ್ಟವಾಗಿದೆ. ಸೂರ್ಯ, ಚಂದ್ರ,ಮಳೆ, ಗಂಗೆ, ಬೆಂಕಿ ಇವುಗಳಿಗೆ ಒಂದೊಂದಕ್ಕೂ ಒಂದೊಂದು ಸ್ಥಾನವನ್ನು ನೀಡಿದ್ದಾರೆ. ಜೊತೆಗೆ ಅವುಗಳಿಗೆ ಸಂಬಂಧಿಸಿದ ಕ್ರಿಯಾ ವಿಧಿಗಳು ಇಂದಿಗೂ ಜನಪದರಲ್ಲಿ ನಂಬಿಕೆಗಳಾಗಿ ಉಳಿದುಕೊಂಡಿವೆ. ಆನಪದರಲ್ಲಿ ದೈವ, ಮಾಟ ಮಂತ್ರಗಳಿಗೆ ಅವರದೇ ಆದ ತಿಳುವಳಿಕೆ ಇದೆ. ಇವುಗಳಲ್ಲಿ ಕೆಲವು ಇಂದು ಮೂಢನಂಬಿಕೆಗಳಾಗಿ ಕಂಡುಬರುತ್ತವೆ. ಆದರೆ ಮಾನವ ಇವುಗಳನ್ನು ತನ್ನ ಕಾಲ ಸಂದರ್ಭದಲ್ಲಿ ಅಗತ್ಯಕ್ಕೆ ತಕ್ಕಂತೆ ರೂಪಿಸಿಕೊಂಡಿರುವುದನ್ನು ಕಂಡುಕೊಂಡಿದ್ದಾರೆ. ಇವು ಇಂದು ಕೆಲವು ನಿರರ್ತಕವಾಗಿರುವುದು ಕಂಡುಬರುತ್ತದೆ. ಆದರೂ ಮಾನವನಲ್ಲಿ ಇಂದಿಗೂ ಕೂಡ ಕೆಲವು ನಂಬಿಕೆಗಳು ಚಾಲ್ತಿಯಲ್ಲಿವೆ.

ಆದಿಮ ಸಮಾಜ ಅಥಾವ ಸಮುದಾಯದ ಜನರು ತಮ್ಮ ನಡಾವಳಿಗಳನ್ನು ಹಾಗೂ ಪ್ರಕೃತಿಯ ಆಗುಹೋಗುಗಳನ್ನು ವಿಶೇಷವಾಗಿ ಗಮನಿಸುತ್ತಿದ್ದಾಗಲೂ ಸಮುದಾಯ ಸದಸ್ಯರ ನಿರ್ವಹಣೆಯ ಆಸ್ಥಿತ್ವದ ಕಾರಣಕ್ಕಾಗಿ ವಿಶೇಷ ಬುದ್ಧಿಮತ್ತೆಯ ಒಂದು ಸಮೂಹವನ್ನು ಆಮೂರ್ತ ಚಿಂತನೆಗೆ ಒಡ್ಡಿಕೊಳ್ಳಲು ಅವಕಾಶ ನೀಡಲು ಸಾಧ್ಯವಿರಲಿಲ್ಲ ಮತ್ತು ಸಾಧುವೂ ಆಗಿರಲಿಲ್ಲ ಜಾರ್ಜ್ ಥಾಮ್ಸನ್ ಹೇಳುವಂತೆ ಆಧಿಮ ಸಮಾಜದಲ್ಲಿ ಒಂದೆಡೆ ಮಾಂತ್ರಿಕತೆಯ ರೂಪದಲ್ಲಿ ನಿಸರ್ಗದ ಆದ್ಯವ್ಯವಸ್ಥೆಯ ಕಲ್ಪನೆಗಳು ಆಭಿವ್ಯಕ್ತಿಗೊಳ್ಳುತ್ತಿದ್ದವು. ಇದು ಉತ್ಪಾದನೆಯ ವಿಷಯದಲ್ಲಿ ನೈಜ ವಿಧಾನಗಳ ಕುಂದು ಕೊರತೆಗಳ ನಿವಾರಣೆಗೆ ಪೂರಕವಾಗಿದ್ದ ಭ್ರಾಮಕ ವಿಧಾನಗಳ ರೂಪವೇ ಆಗಿತ್ತು. ಮತ್ತೊಂದೆಡೆ ಮ್ಯಾಜಿಕನ ಕ್ರಿಯೆಗಳಿಗೆ ಮೌಖಿಕ ಸಾಂಗತ್ಯವನ್ನು ಮಿಥಕಗಳು ನೀಡುತ್ತಿದ್ದವು. ಮೂಲತಃ ಮಿಥಕಗಳು ಮಾಂತ್ರಿಕ ಕ್ರಿಯೆಗಳಿಗೆ ಕೇಲವ ಮಾತಿಗೆ ಪರಿಕರಗಳಾಗಿದ್ದವು. ಈ ಮಿಥಕಗಳು ಕ್ರಮೇಣ ವಾಸ್ತವತೆಉ ಆದ್ಯವ್ಯವಸ್ಥೆಯ ಸಿದ್ಧಾಂತವಾಗಿ ಹೊರಹೊಮ್ಮಿದವು.

ಸಮುದಾಯದ ವಿಶ್ವದೃಷ್ಟಿಯ ಪ್ರಮುಖ ಲಕ್ಷಣವನ್ನು ತಿಳಯಲು ಬುಡಕಟ್ಟು ಜನರ ನಂಬಿಕೆಗಳು ಮತ್ತು ಭಾವನೆಗಳಿಗೇ ನಾವು ಮೊರೆ ಹೋಗಬೇಕು. ಆದರೆ ಒಂದಂಶವನ್ನು ಗಮನದಲ್ಲಿರಿಸಿಕೊಳ್ಳಬೇಕು. ಬುಡಕಟ್ಟು ಜೀವನದ ಉಳಿಕೆಗಳು ಅವುಗಳ ಮೂಲ ಆಶಯಗಳಿಗೆ ವಿಮುಖವಾದ ದಿಕ್ಕಿನಲ್ಲಿ ಹೋಗಿ ಬಿಟ್ಟಿರುವಂತೆ ವಿಶ್ವದೃಷ್ಟಿಯ ಪ್ರಮುಖ ಲಕ್ಷಣಗಳು ಸಹ ಮೂಲ ದೃಷ್ಟಿಗೆ ವಿಮುಖವಾಗಿ ಚಲಿಸಿರಬೇಕು. ಬುಡಕಟ್ಟು ಜೀವನದಲ್ಲಿ ವಿಶ್ವದೃಷ್ಟಿಯ ಮೂಲ ಸ್ವರೂಪ ಏನಾಗಿತ್ತು? ಅದು ಸಹಜವಾಗಿಯೇ ಭೌತವಾದಿ ಅಥವಾ ಆದ್ಯ ಭೌತವಾದಿ ದೃಷ್ಟಿ ಆಗಿದ್ದಿರ ಬೇಕು. ಬುಡಕಟ್ಟು ಜೀವನದಲ್ಲಿದ್ದ ಸಾಮೂಹಿಕ ದುಡಿಮೆ ಅದನ್ನೇ ಖಚಿತಗೊಳಿಸುತ್ತದೆ. ಮುಂದೆ ಅದು ಜನರಲ್ಲಿ ಜೀವಂತವಾಗಿ ಉಳಿಯಿತು ಎಂಬುದನ್ನು ಲೋಕಾಯತ (ಅಂದರೆ ಜನರಿಂದ ಬಂದಿದ್ದು) ಸೂಚಿಸುತ್ತದೆ. ಆದಿ ಭೌತವಾದಿ ವಿಶ್ವದೃಷ್ಟಿಯು ಜನರ ಮನಸ್ಥಿನಿಂದ ಸಂಪೂರ್ಣವಾಗಿ ಆಳಿಸಿ ಹೋಗಲಿಲ್ಲ.

ಅನಾಗರೀಕ ವ್ಯವಸ್ಥೆಯನ್ನು ದಾಟಿ ನಾಗರೀಕತೆಯ ಹೊಸ್ತಿಲನ್ನು ಮುಟ್ಟಿದ ಮೇಲೂ ಬಹಳ ಕಾಲದವರೆಗೆ ಮನುಷ್ಯ ತನ್ನ ಭೂತಕಾಲದ ಅನಾಗರೀಕ ಹಂತದ ಅನೇಕ ಅಭ್ಯಾಸಗಳನ್ನು ಪೂರ್ಣವಾಗಿ ಬಿಡಲಾರದೆ ಹೋದ. ನಾಗರೀಕ ಸಮಾಜದ ಮನುಷ್ಯನ ಗ್ರಹಿಕೆಗಳು ಹಾಗೂ ನಂಬಿಕೆಗಳಲ್ಲಿ ಆದಿಮಕಾಲದ ವಿಥ ವಿಧವಾದ ನಂಬಿಕೆಗಳು ಹಾಗೇ ಅಂಟಿಕೊಂಡಿವೆ. ಆದುದರಿಂದಲೇ ನಾಗರೀಕತೆಯ ಪ್ರಾರಂಭದ ದೆಸೆಯ ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳಲು ಅನಾಗರೀಕ ಅವಸ್ಥೆಯ ಸನ್ನಿವೇಶಗಳನ್ನು ವಿಶೇಷವಾಗಿ ತಿಳಿದುಕೊಳ್ಳುವ ಅವಶ್ಯಕತೆಯಿದೆ.

ಜನಪದ ಸಮಾಜದಲ್ಲಿ ನ್ಯಾಯ ಮತ್ತು ನೈತಿಕತೆಗೆ ಪ್ರಾಮುಖ್ಯವಿದೆ. ಇಲ್ಲಿಯ ಕಾನೂನುಗಳು ಅನೌಪಚಾರಿಕವಾದವುಗಳು. ಜನರ ನಡಾವಳಿಕೆಗಳನ್ನು ತಿದ್ದಲು ಇವುಗಳು ನಿರ್ಮಾಣಗೊಂಡಿರಬೇಕು. ಇವು ಆಧುನಿಕ ನ್ಯಾಯ ಪದ್ಧತಿಗಿಂತ ಭಿನ್ನವಾದವುಗಳು. ವ್ಯಕ್ತಿ ತಪ್ಪು ಮಾಡಿದ ಸಂದರ್ಭದಲ್ಲಿ ದೈವದ ಸನ್ನಿಧಿಯಲ್ಲಿ ಕೆಲವು ಪರೀಕ್ಷೆಗಳ ಮೂಲಕ ಮತ್ತು ಆಣೆ ಪ್ರಮಾಣಗಳ ಮೂಲಕವೂ ತಪ್ಪಿತಸ್ಥರನ್ನು ಶಿಕ್ಷಿಸುವ ಸಂದರ್ಭಗಳಿವೆ. ತಪ್ಪಿಗೆ ಶಿಕ್ಷೆಯೂ ಸಹ ನ್ಯಾಯ ಸಮ್ಮತವಾಗಿರುತ್ತದೆ. ದಂಡನೆ, ದೇಹದಂಡನೆ ಮೊದಲಾದ ರೀತಿಯಲ್ಲಿ ಶಿಕ್ಷೆಗಳನ್ನು ವಿಧಿಸಲಾಗುತ್ತದೆ. ಇವರಿಗೆ ಶಿಕ್ಷೆಯನ್ನು ನೀಡುವವರನ್ನು ಪಂಚರೆಂದು ಕರೆಯಲಾಗುತ್ತದೆ. ಜನಪದರಲ್ಲಿ ಶಿಕ್ಷೆ ಎಲ್ಲರ ಗಮನಕ್ಕೆ ಬರುತ್ತದೆ. ಇದರಿಂದ ಮುಂದಿನ ತಲೆಮಾರಿಗೆ ಸೂಕ್ತ ರೀತಿಯಲ್ಲಿ ತಪ್ಪುಗಳಿಗೆ ಅವಕಾಶವಾಗದ ರೀತಿಯಲ್ಲಿ ಸಮಾಜವನ್ನು ರೂಪಿಸಲಿಕ್ಕೆ ಸಹಾಯಕವಾಗುತ್ತದೆ. ಇದರಿಂದ ಜನಪದರಲ್ಲಿ ಶಾಂತಿ, ಸಹಕಾರವನ್ನು ತರುವುದೇ ಇದರ ಉದ್ದೇಶ. ಜನಪದರಲ್ಲಿ ನ್ಯಾಯ ನಿರ್ಣಯ ಮಾಡಿದ ಎರಡೂ ಪಕ್ಷದವರು ಊರಿನ ಸಮಸ್ಥರು ಪಂಚರ ತೀರ್ಪನ್ನು ಗೌರವಿಸಬೇಕಾಗುತ್ತದೆ.

ನ್ಯಾಯದ ಪರಿಕಲ್ಪನೆಯನ್ನು ಕುರಿತು ಅಂಬೇಡ್ಕರರು ವಿಶ್ಲೇಷಿಸುವಾಗ ಪ್ರೊ ಬರ್ಗ್ ಮನ್ನರ ವ್ಯಾಖ್ಯಾನಕ್ಕೆ ಹೆಚ್ಚು ಒತ್ತು ಕೊಡುತ್ತಾರೆ. ಸಮಾನತೆ ಮತ್ತು ಸುಸಂಗತ ಪರಿಹಾರದ ತತ್ವವನ್ನು ನ್ಯಾಯಪರತೆ ಎತ್ತಿ ಹಿಡಿಯುತ್ತದೆ. ಕಾನೂನು ಮತ್ತು ನಿಯಮಗಳು ಸರಿಯಾದವು ಮತ್ತು ಋಜುಮಾರ್ಗಗಳು ಸಮಾನತೆಯ ಮೌಲ್ಯಕ್ಕೆ ಸಂಬಂಧ ಪಡುತ್ತವೆ. ಎಲ್ಲಾ ಮನುಷ್ಯರೂ ಸಮಾನರೆನ್ನುವುದಾದರೆ ಎಲ್ಲರೂ ಒಂದೇ ಮೂಲಕ್ಕೆ ಸೇರುತ್ತಾರೆ. ಮತ್ತು ಸಾರ ಸಂಗ್ರಹದಲ್ಲಿ ಒಂದೇ ಆಗಿರುತ್ತಾರೆ. ಅದರಿಂದ ಮೂಲಭೂತ ಹಕ್ಕುಗಳು ಸಮಾನ ಸ್ವಾತಂತ್ರ್ಯಗಳಿಗೆ ಎಲ್ಲರೂ ಬಾಧ್ಯರಾಗಿರುತ್ತಾರೆ. ಸಂಗ್ರಹವಾಗಿ ಹೇಳುವುದಾದರೆ, ಸ್ವಾತಂತ್ರ್ಯ ಸಮಾನತೆ ಮತ್ತು ಸಹೋದರತೆಗೆ ನ್ಯಾಯ ವೆಂಬುದು ಮತ್ತೊಂದು ಹೆಸರಾಗಿದೆ ಎಂಬುದನ್ನು ಹೇಳುತ್ತಾರೆ. ಯಾವುದು ಸರಿ ಯಾವುದು ತಪ್ಪು ಎಂಬುದನ್ನು ನಿರ್ಣಯಿಸಲು ಅವು ನೆರವಾಗುತ್ತವೆ. ಅವುಗಳನ್ನು ಅನುಸರಿಸುವ ಸಮಾಜಕ್ಕೆ ಅವು ತಕ್ಕಂತೆ ಹೊಂದಿಕೊಳ್ಳುತ್ತವೆ. ಒಂದು ಮಾನದಂಡವಾಗಿ ಉಪಯುಕ್ತತೆಯೆಂಬುದು ಪುರಾತನ

ಸಮಾಜಕ್ಕೆ ಹೊಂದಿಕೆಯಾಗಿತ್ತು. ಅಲ್ಲಿ ಸಮಾಜವೇ ಕೊಟ್ಟ ಕೊನೆಯ ಗುರಿ, ನೈತಿಕತೆ ಎಂಬುದು, ಸಮಾಜದ ಒಳಿತಿಗಾಗಿ ಎಂಬ ಅಭಿಪ್ರಾಯವನ್ನೇ ಅಂಗೀಕರಿಸಲಾಗಿತ್ತು. ನ್ಯಾಯ ಎಂಬುದಕ್ಕೆ ಒಂದು ಮಾನದಂಡವಾಗಿ ಆಧುನಿಕ ಸಮಾಜಕ್ಕೆ ಉಚಿತವಾಗಿರಲು ಕಾರಣ ಅಲ್ಲಿಯೇ ವ್ಯಕ್ತಿಯೇ ಪ್ರಧಾನ. ನೈತಿಕತೆ ಎಂಬುದು ವ್ಯಕ್ತಿಯ ಹಿತವನ್ನು ಕಾಪಾಡುತ್ತದೆ ಎಂಬುದಕ್ಕಾಗಿ ಅದಕ್ಕೆ ಮಹತ್ವ ದೊರೆಯಿತು.

ಪ್ರೊ. ಡ್ಯೂಯಿ ಬರೆಯುವಂತೆ, ಒಂದು ಗುಂಪು ಅಥವಾ ಪಂಗಡದ ಪ್ರತ್ಯೇಕತೆ ಆದರ ಸಮಾಜ ವಿರೋಧಿ ಧೋರಣೆಯನ್ನು ಎತ್ತಿ ತೋರುತ್ತದೆ. ಎಲ್ಲೆಲ್ಲಿ ಒಂದು ಪಂಗಡಕ್ಕೆ ಬೇರೆ ಪಂಗಡಗಳೊಡನೆ ಸಹ ಕಾರ್ಯದಲ್ಲಿ ತೊಡಗದಂತೆ ಮಾಡುವ ಅದರದೇ ಆದ ಹಿತಾಸಕ್ತಿಗಳಿರುತ್ತವೆಯೋ ಆ ಮೂಲಕ ಮರು ಸಂಘಟನೆ ಹಾಗೂ ವಿಸ್ತೃತ ಸಂಬಂಧಗಳ ಬದಲು ಕೇವಲ ತಾನು ಪಡೆದಿದ್ದನ್ನು ಉಳಿಸಿಕೊಳ್ಳುವ ಉದ್ದೇಶವಿರುತ್ತದೋ ಅಲ್ಲೆಲ್ಲಾ ಈ ಧೋರಣೆ ಕಂಡುಬರುತ್ತದೆ. ಇದು ದೇಶ ದೇಶಗಳನ್ನು ಪ್ರತ್ಯೇಕಗೊಳಿಸುತ್ತದೆ. ಹೊರಗಿನ ಜೀವನದೊಡನೆ ಸಂಬಂಧವೇ ಇಲ್ಲವೇನೋ ಎಂಬಂಥ ಸಾಚಾರಿಕ ಕಾಳಜಿಗಳ ಕುಟುಂಬಗಳನ್ನು ಪ್ರತ್ಯೇಕವಾಗಿಡುತ್ತದೆ. ಮನೆ ಮತ್ತು ಸಮುದಾಯಕ್ಕೆ ಸಂಬಂಧವಿಲ್ಲದಂತೆ ಶಾಲೆಗಳನ್ನು ಬೇರೆ ಮಾಡುತ್ತದೆ. ಈ ಪಂಚಾಯಿತಿಗಳು ದಕ್ಷಿಣ ಭಾರತದ ಸಮಾಜದ ವರ್ತನೆಯನ್ನು ನಿಯಂತ್ರಿಸುವಲ್ಲಿ ಒಂದು ನಿರ್ಣಾಯಕ ಪಾತ್ರವನ್ನು ವಹಿಸಿರುವುದನ್ನು ಕಾಣಬಹುದಾಗಿದೆ. ಜನರ ಮೇಲೆ ಎಷ್ಟೇ ಬಲವಂತವಾಗಿ ಈ ನಿಯಮಗಳು ಹೇರಲ್ಪಟ್ಟಿದ್ದರೂ ಜನರು ಎಷ್ಟೇ ಮನಸಿಲ್ಲದ ಮನಸಿನಲ್ಲಿ ಇವನ್ನು ಒಪ್ಪಿಕೊಂಡಿದ್ದರೂ ಅದರಲ್ಲಿನ ಸಮಾನ ಅಂಶ ಅನ್ಯೆತಿಕತೆ ಮತ್ತು ಪ್ರತ್ಯೇಕತೆಯನ್ನು ಸಮತೋಲನದಲ್ಲಿಡಲು ಸಹಾಯಕವಾಗಿತ್ತು. ಎಷ್ಟೇ ಅರಾಜಕತೆ ಇದದರು ಬ್ರಿಟೀಷ್ ಪೂರ್ವದ ಚರಿತ್ರೆಯಲ್ಲಿ ಕಂಡುಬರುವ ಅರಾಜಕತೆ ಅಲ್ಲಿ ಕಂಡ ಸಮತೋಲನ ಆಯ ತಪ್ಪದೆ ಉಳಿದಿದ್ದನ್ನು ಕಾಣುತ್ತೇವೆ.

ಯಾವುದೇ ಒಂದು ಸಮುದಾಯ ಸಾಮಾಜಿಕ ಬಣ ಪಂಗಡ ಅಥವಾ ರಾಷ್ಟ್ರ ವ್ಯವಹಾರ ಸಾಧುವಲ್ಲದ ನೈತಿಕ ವ್ಯವಸ್ಥೆಯನ್ನು ಬೆಳಸಿಕೊಂಡು ಬಂದರೆ ಅಥವಾ ತನ್ನ ಶಕ್ತಿಗುಂದಿಸಿ ಅಸ್ತಿತ್ವಕ್ಕೆ ಮಾರಕವಾಗಬಲ್ಲ ಸಾಮಾಜಿಕ ಕ್ರಿಯೆಗಳಿಗೆ ತನ್ನ ಅನುಮತಿ ಕೊಡುತ್ತಾ ಶ್ರೇಯೋಭಿವೃದ್ಧಿಗೆ ಸಾಧನವಾಗಬಲ್ಲ ಕಾರ್ಯಗಳನ್ನು ನಿಷೇಧಿಸುತ್ತಾ ನಡೆದರೆ ಅಂಥ ಸಮುದಾಯ ಬಣ, ಪಂಗಡ ಇತ್ಯಾದಿಗಳು ನಿರ್ನಾಮವಾಗುವುದು ಖಚಿತ ಹೀಗಾಗಿ ಒಂದು ಸಮುದಾಯದ ಬದುಕಿನಲ್ಲಿ ಸಮ್ಮತಿ ಅಸಮ್ಮತಿಯ ಸಂಪ್ರದಾಯಗಳು ಅದಕ್ಕೆ ಪೂರಕವೂ ಆಗಬಹುದು ಪೂರಕವೂ ಆಗಬಹುದು. ಇಂಥ ಸಂಪ್ರದಾಯಗಳೆಲ್ಲಾ ಸಾಮಾನ್ಯವಾಗಿ ಧರ್ಮ ಮತ್ತು ನೈತಿಕತೆಯ ಪರಿಣಾಮಗಳೇ ಆಗಿರುತ್ತವೆ.

ಮಾನವ ಮೂಲತಃ ಸಂಘ ಜೀವಿ. ಆದ್ದರಿಂದ ಅವನಿಗೆ ಸಹಕಾರ ಬೇಕು. ಪ್ರಕೃತಿಯೊಂದಿಗೆ ಬದುಕನ್ನು ರೂಪಿಸಿಕೊಂಡ ಸಂದರ್ಭದಲ್ಲಿ ಮಾನವ ಪ್ರಕೃತಿ ವಿಕೋಪಗಳಿಂದ ರಕ್ಷಣೆ ಪಡೆಯಲು ಅಲ್ಲಿಂದಲೇ ಸಹಜೀವನವನ್ನು ಕಂಡುಕೊಂಡಿರಬೇಕು. ಲೇಖಕರು ಹೇಳುವ ಹಾಗೆ ಸಹಕಾರದಲ್ಲಿ ವ್ಯಕ್ತಿಗತ ಮತ್ತು ಬಲವಂತ ಎಂಬ ಎರಡು ಬಗೆಗಳಿವೆ. ಮಾನವ ಅಲೆಮಾರಿಯಾದ ಸಮಯದಲ್ಲಿ ಶಕ್ತಿ ಬಲದಿಂದ ದುಷ್ಟ ಪ್ರಾಣಿಗಳಿಂದ ರಕ್ಷಣೆ ಪಡೆಯಬೇಕಾಯಿತು. ಇಂತಹ ಸಂದರ್ಭದಲ್ಲಿ ಗುಂಪುಗಳಲ್ಲಿ ವಾಸಿಸುತ್ತಿದ್ದ. ಇಲ್ಲಿ ಬಲಹೀನರು ಬಲಶಾಲಿಗಳ ಆಜ್ಞೆಯಂತೆ ಜೀವಿಸುತ್ತಿದ್ದರು. ಮಾನವ ನೆಲೆನಿಂತ ಮೇಲೆ ತನ್ನ ಶಕ್ತಿ ಜೊತೆಗೆ ಆಯುಧಗಳ ಉಪಯೋಗವನ್ನು ಕಂಡುಕೊಂಡ. ಮುಂದೆ ಕೌಟುಂಬಿಕ ಪರಿಸರದಲ್ಲಿ ವಾಸಿಸತೊಡಗಿದ ಮೇಲೆ ಅವನಿಗೆ ಸಹಕಾರದ ಅವಶ್ಯಕತೆಯನ್ನು ಮನಗಾಣುವಂತಾಯಿತು.

ಮನುಷ್ಯ ನೆಲೆನಿಂತಿದ್ದೇ ಒಂದು ಕ್ರಾಂತಿ ಎನ್ನಬಹುದು. ಇದರಿಂದ ಗ್ರಾಮ ಜೀವನ ಆರಂಭವಾದುದ್ದು. ಹಾಗಾಗಿ ಮನುಷ್ಯನಿಗೆ ಸಹಕಾರ ಮತ್ತು ಸಹಬಾಳ್ವೆ ಅನಿವಾರ್ಯವಾಯಿತು. ಸಹಜೀವನದ ಜೊತೆಗೆ ಧಾರ್ಮಿಕ ಸಮಾಜಿಕ ಆರ್ಥಿಕ ವಿಚಾರಗಳಲ್ಲಿ ಪರಸ್ಪರ ಸಹಕಾರ ಮುಖ್ಯವಾಯಿತು. ವ್ಯಕ್ತಿ ತಾನೊಬ್ಬನೇ ಬದುಕಲು ಮುಖ್ಯವಲ್ಲ ತನ್ನಲ್ಲಿರುವ ವಸ್ತುಗಳ ವಿನಿಮಯದ ಮೂಲಕ ಕಷ್ಟ ಸುಖದಲ್ಲಿ ಭಾಗಿಯಾವುದರ ಮೂಲಕ ಸಹಬಾಳ್ವೆಗೆ ಅಡಿಯಿಟ್ಟ ಎನ್ನಬಹುದು. ಗ್ರಾಮ ಜೀವಿಯಾದ ಮೇಲೆ ಪಶುಪಾಲನೆ ವ್ಯವಸಾಯವನ್ನು ಕಲಿತ. ವ್ಯವಸಾಯಕ್ಕೆ ನೆರವಾಗಲು ಬಂಧುಗಳ ಸಹಕಾರ ಮುಖ್ಯವಾಯಿತು. ಜನಪದ ಸಮಾಜವು ಪ್ರಗತಿಯಾದಂತೆಲ್ಲ ಸಹಕಾರ ಭಾವನೆಗಳಲ್ಲಿ ಬದಲಾವಣೆ ಕಂಡುಬಂದವು ಇದರಿಂದ ಕೂಲಿಕಾರರ ಗುಂಪು ಸೃಷ್ಟಿಯಾಯಿತು. ಇಲ್ಲಿ ರೈತ ವ್ಯವಸಾಯಗಾರನಾಗಿ ಬದಲಾದ್ದರಿಂದ ಕೂಲಿ ಕಾರ್ಮಿಕರ ಸಂಬಂಧದಲ್ಲಿ ಹಣ ವಿನಿಮಯ ರೂಪದಲ್ಲಿ ಅಸ್ತಿತ್ವವನ್ನು ಪಡೆದುಕೊಂಡಿದೆ. ಮುಂದುವರೆದು ಸಂಘ ಜೀವಿಯಾದ ಮೇಲೆ ಗ್ರಾಮ ರಕ್ಷಣೆಯ ಜವಾಬ್ಧಾರಿಯನ್ನು ಎಲ್ಲರೂ ನಿರ್ವಹಿಸಬೇಕಾಯಿತು. ಇದರಿಂದ ಸಹಕಾರ ಜೀವನ ಮುಖ್ಯವಾಯಿತು. ನಂತರದಲ್ಲಿ ಹಬ್ಬ ಹರಿದಿನ ಆಚರಣೆ, ಜಾತ್ರೆ ಇಂತಹ ಸಂದರ್ಭದಲ್ಲಿ ಮನೆಗೊಬ್ಬರಂತೆ ಎಲ್ಲರೂ ಸೇರಿ ಪಾಲ್ಗೊಳ್ಳುವುದು ಸರ್ವೆ ಸಾಮಾನ್ಯವಾಯಿತು. ಇವೆಲ್ಲವುಗಳನ್ನು ಇರ್ವಹಿಸಲು ಊರಿನ ಮುಖಂಡನ ಜವಾಬ್ಧಾರಿಯೂ ಬೇಕಾಯಿತು. ಇವನು ಜಾತಿ ಕುಲ ಮನೆತನದ ಪರಂಪರೆಯೊಂದಿಗೆ ಬಂದವನಾಗಿರುತ್ತಾನೆ. ಇವನ ಕರ್ತವ್ಯವೆಂದರೆ ಶುಭ ಸಂದರ್ಭದಲ್ಲಿ ಶಾಂತಿ ಸಹಕಾರಗಳಿಗೆ ನೆರವು ನೀಡುವುದು ಇವನ ಜವಾಬ್ಧಾರಿ.

ಇಂದು ಇಂತಹ ಸಹಕಾರ ಭಾವನೆ ಜನಪದರಲ್ಲಿ ಇಲ್ಲವಾಗಿದೆ. ಶಿಕ್ಷಣ ಸಂಪರ್ಕ ದುಡಿಮೆಯ ಹೊಸ ಮಾರ್ಗಗಳು ರೂಪಗೊಂಡ ಮೇಲೆ ಸಹಕಾರದ ಭಾವನೆ ಬದಲಾಗಿದೆ. ಜೊತೆಗೆ ಇಂದು ಯಂತ್ರ ನಾಗರಿಕತೆ ಬಂದು ಸಹಕಾರ ಜೀವನಕ್ಕೆ ಅವಕಾಶವಿಲ್ಲದಂತಾಗಿದೆ. ಸಂಪರ್ಕ ಸಾಧನಗಳಿಂದ ಜನಪದರ ಜೀವನದಲ್ಲಿ ಅನೇಕ ಬಗೆಯ ಸಂಘ ಸಂಸ್ಥೆಗಳು ಸ್ಥಾಪನೆಯಾಗಿವೆ. ಸಂಘಗಳಿಗೆ ತಜ್ಞರ ನೇಮಕವಾದ ಮೇಲೆ ಇವು ಗ್ರಾಮೀಣರ ಅನೇಕ ಅವಶ್ಯಕತೆಗಳನ್ನು ಪೂರೈಸತೊಡಗಿವೆ. ಜನಪದರ ಅಭಿವೃದ್ಧಿಗೆ ಸಾಲ ಸೌಲಭ್ಯಗಳ ರೂಪದಲ್ಲಿ ಬದುಕನ್ನು ಸುಧಾರಿಸಲು ಇವು ಕಾರಣವಾಗಿವೆ. ಆದರೆ ಸಹಕಾರ ಸಂಸ್ಥೆಗಳು ಇಂದು ಉಳ್ಳವರ ಕೈಗೊಂಬೆಗಳಾಗಿವೆ. ಇದರಿಂದ ಪ್ರಬಲರು ದುರ್ಬಲರನ್ನು ಶೋಷಿಸುವ ಬಗೆಗಳು ಹೆಚ್ಚಾಗಿ ಜನಪದ ಸಂಸ್ಕೃತಿಯ ಮೂಲ ಆಶಯಗಳಿಗೆ ದಕ್ಕೆಯಾಗಿದೆ. ಜನಪದ ಸಮಾಜದಲ್ಲಿ ಕಳ್ಳುಬಳ್ಳಿ ಸಂಬಂಧಗಳಿಗೆ ಮಾನ್ಯತೆ ಇತ್ತು. ಇಂದು ಲಾಭಕ್ಕಾಗಿ ವ್ಯಕ್ತಿಗತ ಅನುಕೂಲಗಳಿಗಾಗಿ ಸಂಬಂಧಗಳಿಗೆ ಬೆಲೆಯಿಲ್ಲದಂತಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ರಕ್ತ ಸಂಬಂಧಗಳಿಗೆ ಮಾನ್ಯತೆ ಇತ್ತು. ಜನಪದ ಸಮಾಜದ ಮುಖ್ಯ ಲಕ್ಷಣವೆಂದರೆ ಸಹಕಾರ ಸಹಬಾಳ್ವೆ ಇವು ಇಲ್ಲದೆ ಜನಪದ ಸಮಾಜವನ್ನು ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲವಾಗಿದೆ.

ನಾವು ಮೊದಲಿನ ಪ್ರವೇಶಿಕೆಯ ಮಾತುಗಳಿಗೆ ಬರುವುದಾದರೆ ಮಾನವ ಬುದ್ಧಿಮತ್ತೆ ವಿಕಾಸ ಹೊಂದಿದ ಕ್ರಮಕ್ಕನುಗುಣವಾಗಿಯೆ ಆತನ ಸೃಜನಶೀಲ ಮೂರ್ತರೂಪಗಳನ್ನು ನಾವು ಅರ್ಥೈಸಿಕೊಂಡು ಅಧ್ಯಯನ ಮಾಡಬೇಕಿದೆ. ಇಂದಿನ ಸಿದ್ಧಾಂತಗಳು ವಾದಗಳ ಅತೀ ವೈಜ್ಞಾನಿಕ ಅಪಾಯದ ತುದಿಯಲ್ಲಿ ನಿಂತು ಬೇರಿನ ಮೂಲ ಸ್ಥಿತಿಗೆ ವ್ಯಾಖ್ಯಾನ ಕೊಡುವಾಗ ಬೇರಿ ಧಾತು ಕಂಡುಕೊಳ್ಳುವುದು ಮುಖ್ಯ. ಇಂದು ನಾವು ಯಾವುದನ್ನು ಹಿಂದಿನ ಕಾಲದ ಆಚರಣೆ ನಂಬಿಕೆಯನನ್ನು ಅಪಮೌಲ್ಯವೆಂದು ವ್ಯಾಖ್ಯಾನಿಸಿಬಿಡುತ್ತೆವೆಯೋ ಅದೆ ಅಂದಿನ ಕಾಲದ ಮೌಲ್ಯ ಆಗಿರಲಿಕ್ಕೂ ಸಾಧ್ಯ. ಯಾಕೆಂದರೆ ಅಪಮೌಲ್ಯವೆಂದು ನಂಬಿಕೆ ಬಂದ ತಕ್ಷಣ ಯಾವ ಸಮುದಾಯವೂ ಸಂಸ್ಕೃತಿಯೂ ಅದಕ್ಕೆ ಕಟ್ಟುಬೀಳುವುದಿಲ್ಲ. ತಕ್ಷಣ ಪರ್ಯಾಯ ವಸ್ತುಸ್ಥಿತಿ ಅನ್ವೇಷಣೆಗೆ ತೊಡಗುತ್ತದೆ. ಆದರೂ ಪ್ರಾದಿಮ ನಂಬಿಕೆಯನ್ನು ಸಂಪೂರ್ಣ ಬಿಡದೆ ತನ್ನ ಸಾಂಸ್ಕೃತಿಕ ಅನನ್ಯತೆಯನ್ನು ಒಂದು ಸಾಂಕೇತಿಕಾರ್ಥದಲ್ಲಿ ಆಚರಣೆಗೆ ತಂದುಕೊಂಡು ಮುನ್ನಡೆಯುತ್ತದೆ. ತನ್ನ ಪ್ರಸ್ತುತ ಜೀವನದಲ್ಲಿ ತಾನದನ್ನು ಅಳವಡಿಸಿಕೊಳ್ಳದಿದ್ದರೂ ಅದರ ಅವಶ್ಯಕತೆ ಇರದಿದ್ದರೂ ಅದನ್ನು ಸಾಂಕೇತಿಕವಾಗಿ ಆಚರಣೆಗೆ ಒಳಪಡಿಸುವುದು ಪ್ರಾದಿಮ ಪ್ರಜ್ಞೆಯ ಅನನ್ಯತೆಯ ಪಳೆಯುಳಿಕೆಯಾಗಿದೆ. ಇದೆ ಕೃತಿಯಲ್ಲಿ ಇದನ್ನು ತಣ್ಣನೆಯ ಒಪ್ಪಿತ ಭಾವದಲ್ಲಿಯೆ ವಿವರಿಸಿಕೊಳ್ಳುತ್ತಾ ಸಾಗುವ ಕ್ರಮ ಇದರ ಧನಾತ್ಮಕ ಗುಣ.

ಸೃಷ್ಟಿಯಲ್ಲಿ ಮಾನವ ನಿನ್ನೆ ಮೊನ್ನೆಯವನಲ್ಲ. ಕೆಲವು ಸಾವಿರ ಲಕ್ಷ ವರ್ಷಗಳಷ್ಟು ಹಳಬ ಎನ್ನಬಹುದೇನೋ. ಆದಿಯಿಂದ ಇಂದಿನವರೆಗೂ ಇವನು ಒಂದೆ ತೆರನಾಗಿ ಇದ್ದನೆಂದಾಗಲೀ ಜೀವಿಸಿದನೆಂದಾಗಲೀ ಒಂದೆ ವಿಧವಾದ ಅಭಿಪ್ರಾಯಗಳೊಂದಿಗೆ ಜೀವಿಸಿದ್ದನೆಂದಾಗಲೀ ಒಂದೆ ರೀತಿಯಲ್ಲಿ ಪ್ರವರ್ತಿಸಿದನೆಂದಾಗಲಿ ಯಾರೂ ಹೇಳಲಾರರು. ಮಾನವ ಬದಲಾದಂತೆ ಅವನ ಬದುಕಿನ ಪದ್ಧತಿ ಬದಲಾಯಿತು ಅವನ ಭಾವನೆಗಳು ಬದಲಾದವು. ವಿಜ್ಞಾನ ಬದಲಾಯಿತು. ಇವೆಲ್ಲವೂ ಇನ್ನೂ ಬದಲಾಗುತ್ತಲೆ ಇವೆ. ಬದಲಾಗುತ್ತಲೆ ಇರುತ್ತವೆ. ಇಂಥ ಸಂದರ್ಭದಲ್ಲಿ ಬದಲಾದ ಕಾಲಮಾನದ ಮನಸ್ಥಿತಿಯೊಂದು ಮಾನವ ಆದಿಮ ಜಾಡಿನ ಪಳಯುಳಿಕೆಗಳ ಕಡೆಗೆ ಗಮನವೀಯುವಾಗ ಇಂಥ ಕೃತಿಗಳ ಪ್ರಯತ್ನಗಳು ಅಂಥವರಿಗೆ ದಾರಿದೀಪವಾಗಬಲ್ಲವು ಎನ್ನುವಲ್ಲಿ ಕೃತಿಯ ಪ್ರಸ್ತುತತೆ ಮತ್ತು ಯಶಸ್ಸು ಅಡಗಿದೆ. ಇಂಗ್ಲೀಷ್ ನಲ್ಲಿಯ ಮಾನವಶಾಸ್ತ್ರದ ಕಠಿಣ ಕ್ರಿಯಾ ಸಿದ್ಧಾಂತಗಳನ್ನು ಕನ್ನಡದಲ್ಲಿ ಜನಸಾಮಾನ್ಯರಿಗೂ ಅರ್ಥವಾಗುವಂತೆ ಸರಳ ಭಾಷೆಯಲ್ಲಿ ವಿವರಿಸಿರುವುದು ಮತ್ತೊಂದು ಹೆಚ್ಚುಗಾರಿಕೆಯಾಗಿದೆ. ಎಪ್ಪತ್ತರ ದಶಕದ ಅಧ್ಯಯನ ಮಾದರಿಯ ಮನಸ್ಥಿಯಲ್ಲಿಟ್ಟು ನೋಡಿದಾಗ ಗುರುಮೂರ್ತಿಯವರ ಶ್ರಮ ನಿಜವಾಗಿಯೂ ಅಬಿನಂದನಾರ್ಹವೆನಿಸುವಲ್ಲಿ ಎರಡು ಮಾತಿಲ್ಲ.